# ಗಾಂಧಿಗೆ ಕಿವಿಗೊಡುವುದು

**ಕೃಷ್ಣ ಕುಮಾರ್**

ಜಗತ್ತು ಈ ಶತಮಾನದ ಕೊನೆಯನ್ನು ಸಮೀಪಿಸುತ್ತಿರುವ ಈ ಸಂದರ್ಭದಲ್ಲಿ ಎಂದಿಗಿಂತಲೂ ಹೆಚ್ಚಾಗಿ ಇಂದು ಮಹಾತ್ಮ ಗಾಂಧಿ ಅವರು ಹೇಳಿದ ಮತ್ತು ಅಳವಡಿಸಿಕೊಂಡ ವಿಚಾರಗಳು ದೇಶದ ನೀತಿ ನಿರೂಪಣೆಯ ಮಾರ್ಗದರ್ಶನಕ್ಕೆ ಹೆಚ್ಚು ಹೆಚ್ಚು ಪ್ರಸ್ತುತವಾಗುತ್ತವೆ. ಹೆಚ್ಚು ಆಸಕ್ತಿಕರ ಹಾಗೂ ಹೆಚ್ಚು ವಿವಾದಕ್ಕೊಳಗಾಗಿರುವ ಅವರ ಅಚ್ಚುಮೆಚ್ಚಿನ ವಿಚಾರವೆಂದರೆ ಸ್ಥಳೀಯ ಸ್ವಾವಲಂಬನೆ.

ಪರಸ್ಪರಾವಲಂಬಿತವಾಗಿದೆ ಎಂದು ಹೇಳಲಾಗುವ ಈ ಪ್ರಪಂಚದಲ್ಲಿ ಸ್ಥಳೀಯ ಸ್ವಾವಲಂಬನೆಯು ಅಪ್ರಸ್ತುತವಾಗಿ ಕಾಣುವುದು ಅಷ್ಟೇ ಅಲ್ಲದೆ ಪಾಷಂಡಿತನವಾಗಿಯೂ ತೋರುತ್ತದೆ. ಆದರೂ ಜಗತ್ತು ನಿಜವಾಗಿಯೂ ಪರಸ್ಪರಾವಲಂಬಿತವಾಗಿಲ್ಲ ಎನ್ನುವುದು ಅಷ್ಟೇ ಸತ್ಯ. ದಕ್ಷಿಣದ ಬಹಳಷ್ಟು ದೇಶಗಳು ಉತ್ತರದ (ಉತ್ತರಾರ್ಧ ಗೋಳದ) ದೇಶಗಳ ಸಾಲದ ಸುಳಿಯಲ್ಲಿ ಸಿಲುಕಿದ್ದು ತಮ್ಮ ರಾಷ್ಟ್ರೀಯ ಆದಾಯದ ಬಹುದೊಡ್ಡ ಪಾಲನ್ನು ಇವುಗಳಿಗೆ ಬಡ್ಡಿ ರೂಪದಲ್ಲಿ ಕೊಡಬೇಕಾಗಿದೆ. ಈ ಕರಾಳ ಒತ್ತಡವು ಈ ದೇಶಗಳನ್ನು ಮತ್ತೂ ಬಡತನಕ್ಕೆ ತಳ್ಳಿ ಅಲ್ಲಿನ ಕಾರ್ಮಿಕ ಪಡೆ ಹಾಗೂ ನೈಸರ್ಗಿಕ ಸಂಪನ್ಮೂಲಗಳನ್ನು ಹಂತಹಂತವಾಗಿ ಹೆಚ್ಚು ದುರ್ಬಲಗೊಳಿಸುತ್ತಿದೆ. ಜಾಗತಿಕ ಹಳ್ಳಿ ಎಂದು ಕರೆಯಲ್ಪಡುವ ಜಗತ್ತಿನಲ್ಲಿ ನಿಜವಾದ ಹಳ್ಳಿಗಳು ಜೀವನದ ಅಗತ್ಯಗಳಾದ ಉದ್ಯೋಗ ಹಾಗೂ ಆರೋಗ್ಯ ಸೇವೆಗಳಿಗಾಗಿ ನಗರಗಳನ್ನೇ ಅವಲಂಬಿಸಿವೆ. ಸ್ಥಳೀಯ ಸ್ವಾವಲಂಬನೆಯ ಮೇಲಿನ ಗಾಂಧಿಯ ಒತ್ತಾಯವು ಖಚಿತವಾಗಿಯೂ ಜೀವನದ ಇಂತಹ ಮೂಲಭೂತ ಅಂಶಗಳಿಗೆ ಸಂಬಂಧಿಸಿದ್ದವು. ಪ್ರಪಂಚದಲ್ಲಿ ಇವತ್ತು ಮನುಷ್ಯರು ಪ್ರತಿಯೊಂದು ಸಮಸ್ಯೆಗೂ ಅತ್ಯಾಧುನಿಕ ತಾಂತ್ರಿಕ ಪರಿಹಾರಗಳೊಂದಿಗೆ ಸಜ್ಜಾಗಿದ್ದರೂ ಸಹ, ಹೆಚ್ಚಿನ ಜನರು ಅಪೌಷ್ಟಿಕತೆ, ನಿರುದ್ಯೋಗ ಹಾಗೂ ಧೀರ್ಘಕಾಲೀನ ಕಾಯಿಲೆಗಳಿಂದ ನರಳುತ್ತಿದ್ದಾರೆ. ಕಣ್ಣೆದುರಿನ ಈ ವಿರೋಧಾಭಾಸವು ಮೂಲ ಅಗತ್ಯಗಳ ವಿಷಯಗಳಿಗೆ ಸಂಬಂಧಿಸಿದಂತೆ ಸ್ಥಳೀಯ ಸ್ವಾವಲಂಬನೆಯ ಮೇಲಿನ ಗಾಂಧಿಯವರ ವಾದವನ್ನು ಮತ್ತೊಮ್ಮೆ ಕಿವಿಗೆ ಹಾಕಿಕೊಳ್ಳಬೇಕಾಗಿದೆ ಎಂದು ಸೂಚಿಸುತ್ತದೆ.

ಗಾಂಧಿಯವರ ಬಳುವಳಿಯ ಎರಡನೆಯ ವಿಶಿಷ್ಟ ಅಂಶವೆಂದರೆ ಅದು ನೂತನ ಹಾಗೂ ಸೃಜನಶೀಲ ಕ್ರಿಯೆಗೆ ನೀಡುವ ಮಹತ್ವ. ಗಾಂಧಿಯವರ ತತ್ವ ಎಂಬುದೊಂದು ಏನಾದರೂ ಇದ್ದಲ್ಲಿ ಅದು ಖಂಡಿತವಾಗಿಯೂ ಮನಃಪೂರ್ವಕವಾದ ಮತ್ತು ಕಲ್ಪನಾಶಕ್ತಿಯಿಂದ ಕೂಡಿದ ಪಾತ್ರ ನಿರ್ವಹಣೆಗೆ ಪ್ರಾಮುಖ್ಯತೆ ನೀಡುವ ಕ್ರಿಯೆಯ ತತ್ವವಾಗಿದೆ. ದಕ್ಷಿಣ ಆಫ್ರಿಕಾದಲ್ಲಿನ ಅವರ ಕೆಲಸದಿಂದಲೂ ಮೊದಲಾಗಿ ಗಾಂಧಿಯವರು ಮಾಡಿರುವ ಎಲ್ಲ ಪ್ರಮುಖ ರಾಜಕೀಯ ಮತ್ತು ಸಾಮಾಜಿಕ ಹೋರಾಟಗಳೂ ಈ ಅಂಶವನ್ನು ನಿದರ್ಶಿಸುತ್ತವೆ. ಹಿಂದಿರುಗಿ ನೋಡಿದಾಗ ಈ ಹೋರಾಟಗಳು ಜಾಗತಿಕವಾಗಿ ಮನ ಸೆಳೆಯುವ ಮತ್ತು ಪರಿಪೂರ್ಣವಾಗಿ ಪರಿಕಲ್ಪಿಸಿದ ಸ್ಥಳೀಯ ಸಾಮಾಜಿಕ ನಾಟಕಗಳಂತೆ ಕಾಣುತ್ತವೆ. ಅಂತಹ ಹೋರಾಟದ ಜನಪ್ರಿಯ ಉತ್ತಮ ಉದಾಹರಣೆಯೆಂದರೆ ಪ್ರಾಯಶಃ ಉಪ್ಪಿನ ಸತ್ಯಾಗ್ರಹ. ಆದರೆ ಗಾಂಧಿ ಅವರ ಜೀವನದುದ್ದಕ್ಕೂ ಇಂತಹ ಹಲವಾರು ಸಣ್ಣ ಸಣ್ಣ ಘಟನೆಗಳು ಆಗಿವೆ. ಉದಾಹರಣೆಗೆ, ದಕ್ಷಿಣ ಆಫ್ರಿಕಾದಲ್ಲಿನ ಅವರ ಫೀನಿಕ್ಸ್ ಆಶ್ರಮದ ಮುದ್ರಣ ಯಂತ್ರದ ಎಂಜಿನ್ ಕೆಟ್ಟು ನಿಂತಾಗ, ಗಾಂಧಿಯವರು ತಮ್ಮ ಎಲ್ಲ ಸಹೋದ್ಯೋಗಿಗಳನ್ನು ಒಗ್ಗೂಡಿಸಿ

ಮುದ್ರಣಯಂತ್ರವನ್ನು ರಾತ್ರಿಯಿಡೀ ಕೈಯಿಂದಲೇ ತಿರುಗಿಸುವಂತೆ ಮಾಡಿ ಸಮಯಕ್ಕೆ ಸರಿಯಾಗಿ *Indian Opinion (ಇಂಡಿಯನ್ ಒಪಿನಿಯನ್)* ಪತ್ರಿಕೆಯು ಹೊರಬರುವಂತೆ ಮುದ್ರಿಸಿದ್ದರು. ಮೊದಮೊದಲಿನ ಈ ಘಟನೆಯು, ಒಬ್ಬರ ಪಾತ್ರ ನಿರ್ವಹಣೆಗಿದ್ದ ಬದ್ಧತೆಯನ್ನಲ್ಲದೆ ಗಾಂಧಿಯವರ ಕ್ರಿಯೆಯ ತತ್ವದ ಇನ್ನೂ ಇತರ ಎರಡು ಆಯಾಮಗಳನ್ನು ತೋರಿಸುತ್ತದೆ. ಮೊದಲನೆಯದು ಯಾವುದೇ ಒಂದು ಏಕೈಕ ಆಯ್ಕೆಯ ಮೇಲಿನ ಅವಲಂಬನೆಯಿಂದ ಮುಕ್ತಿ ಎಂದು ಅರ್ಥೈಸಬಹುದಾದ ಸ್ವಾಯತ್ತತೆಗೆ ಅವರು ನೀಡಿದ ಪ್ರಾಮುಖ್ಯತೆ; ಎರಡನೆಯದು ದೃಢ ನಿರ್ಧಾರ. ಗಾಂಧಿಯವರ ಬದುಕನ್ನು ಬೋಧನಾ ವಿಧಾನದ ದೃಷ್ಟಿಕೋನದಿಂದ ನೋಡಿದರೆ, ಅದನ್ನು ಉಪಕ್ರಮತೆಯ ಸ್ವಾತಂತ್ರ್ಯ ಮತ್ತು ಎದುರಿಗಿರುವ ಉದ್ದೇಶಕ್ಕೆ ದೃಢನಿಷ್ಠೆ ಇವೆರಡೂ ಮೌಲ್ಯಗಳ ಬಲುದೊಡ್ಡ ಪಾಠವಾಗಿ ಕಾಣಬಹುದು.

ಕೊನೆಯದಾಗಿ ಗಾಂಧಿಯವರ ಬಳುವಳಿ ನಮಗೆ ನಮ್ಮ ಸ್ಥಳೀಯ ಸಮುದಾಯ ಮತ್ತು ಕುಟುಂಬದ ಮಹತ್ವವನ್ನು ನೆನಪಿಸಲೇಬೇಕು. ಮಕ್ಕಳ ಕಲ್ಯಾಣವು - ವಾಸ್ತವವಾಗಿ ಇಡೀ ಮನುಕುಲದ ಕಲ್ಯಾಣ - ಗಾಂಧಿಯವರ ಸಾಮೂಹಿಕ ಬದುಕಿನ ಲೋಕದೃಷ್ಟಿಯಲ್ಲಿ ಈ ಎರಡು ಘಟಕಗಳಲ್ಲೇ ನೆಲೆಗೊಂಡಿದೆ. ಪ್ರಜಾಸತ್ತಾತ್ಮಕತೆಯು ಆಳುವ ವ್ಯವಸ್ಥೆ ಹಾಗೂ ಬದುಕಿನ ಒಂದು ರೀತಿಯಾಗಿ ಈ ಎರಡೂ ಘಟಕಗಳಲ್ಲಿ ಹೇಗೆ ಅದು ಅಭಿವ್ಯಕ್ತಗೊಳ್ಳುತ್ತದೆ ಎನ್ನುವುದನ್ನು ಅವಲಂಬಿಸಿದೆ. ಪ್ರಾಯಶಃ ಗಾಂಧಿಯವರ ಶೈಕ್ಷಣಿಕ ಚಿಂತನೆಯ ಪ್ರಮುಖ ವಿಮರ್ಶಕರಾಗಿರುವ ಮಾರ್ಜೊರಿ ಸೈಕ್ಸ್ (Marjorie Sykes) ಕೆಲವು ವರ್ಷಗಳ ಹಿಂದೆ ಒಂದು ವಿಚಾರಗೋಷ್ಠಿಯಲ್ಲಿ ನೆನಪಿಸಿದ ಹಾಗೆ ಗಾಂಧಿಯವರ ಪ್ರಜಾಸತ್ತಾತ್ಮಕ ಬದುಕಿನ ಕಲ್ಪನೆಯೂ ಒಂದು ಸಮುದಾಯದ ಸದಸ್ಯರ ನಡುವಿನ ಮುಖಾಮುಖಿ ಮಾತುಕತೆಯ ಸಾಧ್ಯತೆಯ ಮೇಲೆ ಅವಲಂಬಿತವಾಗಿದೆ. ಗ್ರೀಕ್ ತತ್ವಶಾಸ್ತ್ರಜ್ಞರು ಸ್ಥಾಪಿಸಿದ ಈ ಆದರ್ಶವು ಪುರಾತನವಾದದ್ದಾದರೂ, ಈ ನಮ್ಮ ಕಾಲಮಾನದ ಜಗತ್ತು ಪ್ರಜಾಸತ್ತಾತ್ಮಕತೆಯೊಂದೇ ತಕ್ಕುದಾದ ಪ್ರಭುತ್ವದ ರೂಪವೆಂದು ಸಮರ್ಥಿಸಿದರೂ ಸಹ ಅದರ ಅರ್ಥ ಮತ್ತು ಸಾಧ್ಯತೆಗಳನ್ನು ನಾವು ಇನ್ನೂ ಸಾಕಾರಗೊಳಿಸಬೇಕಿದೆ.

ಜಾನ್ ಡ್ಯೂಯಿ (John Dewey) ತನ್ನ ಕೊನೆಯ ಪುಸ್ತಕವಾದ *The Public and Its Problems (ದಿ ಪಬ್ಲಿಕ್ ಅಂಡ ಇಟ್ಸ್ ಪ್ರಾಬ್ಲಮ್ಸ್)* (1927) ನಲ್ಲಿ ಸ್ಥಳೀಯ ಸಮುದಾಯವು ಜೀವಂತಿಕೆಯಿಂದ ಉಳಿದು ಮಾನವನ ಬದುಕಿಗೆ ಪ್ರಸ್ತುತವಾಗಿರುವಲ್ಲಿ 20ನೇ ಶತಮಾನವು ಎದುರಿಸುತ್ತಿರುವ ಸವಾಲುಗಳ ಬಗ್ಗೆ ವಿವರಿಸಿದ್ದಾರೆ. ಇವರ ಶಿಕ್ಷಣದ ತತ್ವವು ಹಲವು ಪ್ರಮುಖ ಆಯಾಮಗಳಲ್ಲಿ ಗಾಂಧಿಯವರ ತತ್ವವನ್ನೇ ಹೋಲುತ್ತದೆ. ಕಳೆದ ದಶಕದಿಂದೀಚೆಗೆ, ಸಮಾಜದ ಆಧುನಿಕ ಯೋಜನಾ ವ್ಯವಸ್ಥೆಯು ಮಕ್ಕಳ ಕಲ್ಯಾಣದ ಜವಾಬ್ದಾರಿಯನ್ನು ನಿರಾಕಾರದ ಪ್ರಭುತ್ವಕ್ಕೆ ಒಪ್ಪಿಸಿದ ಪರಿಣಾಮದಿಂದಾಗಿ ಕುಟುಂಬ ಹಾಗೂ ಸ್ಥಳೀಯ ಸಮುದಾಯಳಿಗೆ ಎಸಗಿದ ಹಾನಿಗೆ ಹಲವು ರಾಷ್ಟ್ರ-ಪ್ರಭುತ್ವಗಳು ಎಚ್ಚೆತ್ತುಕೊಂಡಿವೆ. ಇದನ್ನು ಸರಿಪಡಿಸುವ ಬಗೆಗೆ ಆಲೋಚಿಸುವಾಗ, ನಾವು ಗಾಂಧಿಯವರ ಬಳುವಳಿಯಿಂದ ಅಮೂಲ್ಯವಾದ ವಿಚಾರ ಸಂಪನ್ಮೂಲಗಳನ್ನು ಮತ್ತು ಸ್ಫೂರ್ತಿಯನ್ನು ಪಡೆಯಬಹುದು.

ಒಂದು ಅಪೇಕ್ಷಿತ ಸಮಾಜದ ಬಗೆಗಿನ ಗಾಂಧಿಯವರ ದೂರದೃಷ್ಟಿಯಿಂದ ಮೂಡುವ ಮಕ್ಕಳ ಶಿಕ್ಷಣದ ಮಾದರಿಯು ಗಮನಾರ್ಹವಾಗಿ ಶಿಕ್ಷಣದ ವ್ಯವಸ್ಥೆಯನ್ನು ಸಂಘಟಿಸಲು ಮತ್ತು ಸುಧಾರಿಸಲು ಆಧುನಿಕ ಮಕ್ಕಳ ಮನೋವಿಜ್ಞಾನದಿಂದ ನಾವು ಪಡೆದುಕೊಳ್ಳಬಹುದಾದ ಅತಿ ಮುಖ್ಯ ಸೂಚ್ಯಾರ್ಥಗಳಿಗೆ ಹೊಂದುತ್ತದೆ. ಈ ಸೂಚ್ಯಾರ್ಥಗಳನ್ನು ಕೆಳಗಿನಂತೆ ಪಟ್ಟಿ ಮಾಡಬಹುದು:

- ಮಗುವಿನ ಸುತ್ತಲಿನ ನೇರ ಸಾಮಾಜಿಕ ಪರಿಸರವು ಸ್ವೀಕೃತ ಜ್ಞಾನವನ್ನು ಪುನಃ ಕಂಡುಕೊಳ್ಳಲು ಒಂದು ಸಂಪನ್ಮೂಲವಾಗಿ ನೆರವಾಗಬೇಕು;

- ಪ್ರಪಂಚದ ಬಗೆಗಿನ ತಮ್ಮದೇ ಆದ ಜ್ಞಾನ ಮಾದರಿಗಳನ್ನು ರಚಿಸಿಕೊಳ್ಳಲು ಮಕ್ಕಳಿಗೆ ಸ್ವಾತಂತ್ರ್ಯ ಇರಬೇಕು;
- ಕಲಿಕೆಯ ಪ್ರಕ್ರಿಯೆಯು ಅವರ ದೈಹಿಕ ಶ್ರಮವನ್ನು ಬೇಡುವ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿ ತೊಡಗಿಸಿಕೊಳ್ಳುವಂತಹ ಅವಕಾಶಗಳನ್ನು ಮಕ್ಕಳಿಗೆ ನೀಡಬೇಕು;
- ಮಗುವಿನ ಬದುಕನ್ನು ಅದರ ಮನೆ ಮತ್ತು ಸುತ್ತಲಿನ ಪರಿಸರದಲ್ಲಿ ಅನುರಣಿಸುವಂತೆ ಹಾಗೂ ವಿಸ್ತರಿಸುವಂತೆ ತರಗತಿಯ ಚಟುವಟಿಕೆಗಳು ಇರಬೇಕು.

ಸ್ಥಳೀಯ ಸಂದರ್ಭ ಉಪಕ್ರಮತೆ ಮತ್ತು ದೃಢ ನಿರ್ಧಾರದ ಪ್ರಯೋಗಕ್ಕೆ ಸೂಕ್ತವಾದದ್ದು ಎಂಬ ಗಾಂಧಿಯವರ ಆಯ್ಕೆಯು ಪಿಯಾಝೆಯವರ ಜ್ಞಾನದ ಮನೋ-ತತ್ವದಲ್ಲಿನ ಅನ್ವೇಷಣೆ ಮತ್ತು ಪುನಾರಚನೆಯ ಪರಿಕಲ್ಪನೆಗಳೊಂದಿಗೆ ಸ್ಪಷ್ಟ ಸಾಮ್ಯತೆಯನ್ನು ಹೊಂದಿರುವುದನ್ನು ಸೂಚಿಸುತ್ತದೆ. ಒಂದೆಡೆ, ಮಕ್ಕಳ ವಿಷಯದ ಕಲಿಕೆ ಮತ್ತು ಅವರ ಪರಿಸರ ಇವುಗಳ ನಡುವಿನ ಸಂಬಂಧಗಳನ್ನು ಡ್ಯೂಯಿ ಅವರು ಗ್ರಹಿಸಿದ ರೀತಿ, ಮತ್ತು ಮತ್ತೊಂದೆಡೆ ಗಾಂಧಿಯವರು ಶಾಲೆಯನ್ನು ಸಮುದಾಯದ ಸಾಂಸ್ಥಿಕರಿಸಲಾದ ವೇದಿಕೆ ಎಂದು ಕಂಡಿದ್ದು ಇವೆರಡರ ನಡುವೆ ಸಾಮ್ಯತೆಯನ್ನು ನಾವು ಕಾಣಬಹುದು.

ಗಾಂಧಿಯವರು ನಿರ್ದಿಷ್ಟವಾಗಿ ಶಿಕ್ಷಣದ ಸಂದರ್ಭಕ್ಕೆ ಸಂಬಂಧಿಸಿದಂತೆ ಮಾಡಿದ ಪ್ರಸ್ತಾವನೆಯಲ್ಲಿ ಈ ಸಾಮ್ಯತೆಗಳು ಬಿಂಬಿಸುತಿತ್ತಾದರೂ, ಅವರ ಆರ್ಥಿಕ ಚಿಂತನೆ ಹಾಗೂ ದಕ್ಷಿಣ ಆಫ್ರಿಕಾದಲ್ಲಿನ ಪೀನಿಕ್ಸ್ ಮತ್ತು ಟಾಲ್ಸ್ಟಾಯ್ ಫಾರ್ಮ್‌ಗಳಲ್ಲಿ ಅವರು ಮಕ್ಕಳಿಗೆ ಕಲಿಸಿದಾಗಿನ ತಮ್ಮ ಸ್ವಂತ ಆರಂಭಿಕ ಅನುಭವಗಳಿಗೆ ಸಂಬಂಧಿಸಿದ ಮತ್ತೊಂದು ವಿಷಯವು ಕೂಡ ಈ ಪ್ರಸ್ತಾವನೆಯಲ್ಲಿ ಅಡಕವಾಗಿತ್ತು. ಕರಕುಶಲತೆಯನ್ನು ಒಂದು ಮೂಲ ತತ್ವವಾಗಿ ಶಾಲಾ ಪಠ್ಯಕ್ರಮ ರಚನೆಯಲ್ಲಿ ಸೇರಿಸುವುದಕ್ಕೆ ಇದು ಸಂಬಂಧಿಸಿದ್ದಾಗಿತ್ತು. ಗಾಂಧಿಯವರ ನಯೀ ತಾಲಿಮ್ ಅಥವಾ 'ಹೊಸ ಶಿಕ್ಷಣ' ಅಥವಾ 'ಮೂಲ ಶಿಕ್ಷಣ' ಎಂದೂ ಕರೆಯಲ್ಪಡುವ ಈ ವಿಷಯದ ಬಗ್ಗೆ ಸಾಕಷ್ಟು ಬರೆಯಲಾಗಿದೆ. ಒಟ್ಟಿನಲ್ಲಿ, ಸಾಂಪ್ರದಾಯಿಕ ಕರಕುಶಲ ಕೆಲಸವು ಶಾಲೆಯ ದೈನಂದಿನ ಪಠ್ಯಕ್ರಮಕ್ಕೆ ಒಂದು ಕೇಂದ್ರಬಿಂದುವನ್ನು ಒದಗಿಸುವ ವಿಚಾರದ ಹಿಂದಿನ ತರ್ಕಾಧಾರಕ್ಕೆ ಕೆಳಗಿನ ಅಂಶಗಳು ಮೂಲವಾಗಿದ್ದವು:

- ಶಾಲೆ ಮತ್ತು ವೃತ್ತಿಯ ಜಗತ್ತನ್ನು ಬೆಸೆಯುವುದು;
- ಪಠ್ಯಕ್ರಮವನ್ನು ಚಟುವಟಿಕೆ ಆಧಾರಿತವಾಗಿಸುವುದು; ಮತ್ತು
- ಸ್ವಾವಲಂಬನೆಯ ಭಾವನೆಯನ್ನು ಬೆಳೆಸುವುದು.

ಭಾರತದ ಶಿಕ್ಷಣ ವ್ಯವಸ್ಥೆಗೆ ಒಂದು 'ಮೂಲ' ದೃಷ್ಟಿಕೋನವನ್ನು ನೀಡುವ ನಿಟ್ಟಿನಲ್ಲಿ 30ರ ದಶಕದ ಕೊನೆಯಿಂದ 50ರ ದಶಕದ ಅಂತ್ಯದವರೆಗೆ ನಡೆದ ಪ್ರಯತ್ನದ ಬಗೆಗಿರುವ ಚಾರಿತ್ರಿಕ ದಾಖಲೆಗಳು ಶಾಲಾ ಪಠ್ಯಕ್ರಮ ರಚನೆಯ ಒಂದು ಮೂಲ ತತ್ವವಾಗಿ ಕರಕುಶಲ ಕೆಲಸವನ್ನು ಬಳಸುವ ಗಾಂಧಿಯವರ ವಿಚಾರದ ಹಿನ್ನೆಲೆಯಲ್ಲಿ ಮೂಡಿದ ಹಲವು ಪ್ರಶ್ನೆಗಳು ಮತ್ತು ಸಮಸ್ಯೆಗಳನ್ನು ಉಲ್ಲೇಖಿಸುತ್ತವೆ. ಪ್ರಸ್ತುತಕ್ಕೆ ಕೆಲವು ಪ್ರಶ್ನೆಗಳು ಕೇವಲ ಐತಿಹಾಸಿಕ ಮೌಲ್ಯವನ್ನಷ್ಟೇ ಹೊಂದಿದ್ದರೂ ಸಹ ಅವುಗಳನ್ನು ದಾಖಲಿಸುವುದು ಉಪಯುಕ್ತ. ಕರಕುಶಲ ಕೆಲಸವನ್ನು ಪರಿಚಯಿಸುವುದರಿಂದ ನಾವು ಶಾಲೆಯನ್ನು ಆರ್ಥಿಕವಾಗಿ ಉತ್ಪಾದನಾಶೀಲ ಸಂಸ್ಥೆಯನ್ನಾಗಿಸಬಹುದೇ ಎನ್ನುವುದು ಅತೀ ವಿವಾದಾಸ್ಪದದ ಪ್ರಶ್ನೆಯಾಗಿದ್ದಿತು.

ಸಾಂಪ್ರದಾಯಿಕ ಕರಕುಶಲಕಲೆಗಳ ಸುತ್ತ ಕಟ್ಟುವ ಉತ್ಪಾದನಾಶೀಲ ಚಟುವಟಿಕೆಯು ಶಾಲೆಯನ್ನು ಆರ್ಥಿಕವಾಗಿ ಸ್ವಾವಲಂಬಿಯಾಗಲು ಅನುವು ಮಾಡಿಕೊಡಬಹುದು ಎಂದು ಗಾಂಧಿಯವರು ಪ್ರತಿಪಾದಿಸಿದ್ದಂತೂ

ಸತ್ಯ. ನಿಸ್ಸಂದೇಹವಾಗಿ ಮೂಲ ಶಿಕ್ಷಣ ಕಾರ್ಯಕ್ರಮಗಳು ಎದುರಿಸಬೇಕಿದ್ದ ಬಹಳಷ್ಟು ಪ್ರತಿರೋಧಗಳು ಈ ಅಂಶದಿಂದಲೇ ಹುಟ್ಟಿದವು ಎಂದು ಹೇಳಬಹುದು; ಉತ್ಪಾದನಾಶೀಲ ಶಾಲೆಗಳು ಬಾಲಕಾರ್ಮಿಕ ಕಾರ್ಖಾನೆಗಳಾಗಬಹುದು ಎಂದು ಅದಕ್ಕೆ ವಿರೋಧ ವ್ಯಕ್ತಪಡಿಸಿದವರ ವಾದವಾಗಿತ್ತು. ಐತಿಹಾಸಿಕವಾಗಿ ಹೇಳುವುದಾದರೆ, ಶಾಲೆಗಳನ್ನು ಸ್ವಾವಲಂಬಿಯನ್ನಾಗಿಸುವುದರೆಡೆಗೆ ಗಾಂಧಿಯವರು ಒತ್ತು ನೀಡಿದ್ದು ಮದ್ಯ ಮಾರಾಟದಿಂದ ಬಂದ ಹಣದಿಂದ ಮಕ್ಕಳಿಗೆ ಶಿಕ್ಷಣ ಒದಗಿಸುವುದರ ಬಗ್ಗೆ ಅವರಿಗಿದ್ದ ಅರ್ಥಮಾಡಿಕೊಳ್ಳಬಹುದಾದ ಹೇಸಿಗೆಯಿಂದಾಗಿ ಎಂದು ತೋರುತ್ತದೆ.

ಸಮಯ ಸರಿದಂತೆ ಹಾಗೂ ಆರ್ಥಿಕ ಸಂಪನ್ಮೂಲಗಳನ್ನು ಸೃಷ್ಟಿಸಲು ಮಕ್ಕಳ ಕೆಲಸವನ್ನು ಬಳಸುವುದರಲ್ಲಿನ ಪ್ರಾಯೋಗಿಕ ಕಷ್ಟಗಳು ಹಾಗೂ ಮಿತಿಗಳು ಎರಡನ್ನೂ ಅನುಭವವು ತೋರಿಸಿದಂತೆ ಈ ವಿಚಾರವು ಶಾಲೆಯ ನಿರ್ವಹಣೆಗೆ ವಂತಿಗೆಗಳು ಎಂಬ ಸ್ವರೂಪವನ್ನು ಪಡೆಯಿತು. ಇದು ಕೂಡ ಬಹಳಷ್ಟು ಮಂದಿಗೆ ಒಪ್ಪಿಗೆ ಇರಲಿಲ್ಲ ಎನ್ನುವುದನ್ನು ಮೂಲ ಶಿಕ್ಷಣದಲ್ಲಿ ಪರಿಣತರಾದ ಜಿ. ರಾಮಚಂದ್ರನ್ ಅವರು ಬರೆದಿರುವ ಅಧಿಕೃತ ಪ್ರಕಟಣೆಯಿಂದ ನಾವು ತಿಳಿಯಬಹುದಾಗಿದೆ. 1957 ರಲ್ಲಿ ಭಾರತ ಸರ್ಕಾರವು ಪ್ರಕಟಿಸಿದ ಪ್ರಬಂಧ (monograph) ದಲ್ಲಿ ಅವರು 'ಉತ್ಪಾದನಾಶೀಲ ಕೆಲಸದ ಮೂಲಕ ಶಿಕ್ಷಣವೇ ಅದರ ಪ್ರಮುಖ ಉದ್ದೇಶ, ಆದಾಯವು ಕೇವಲ ಉಪಫಲವಷ್ಟೇ' ಎಂದು ವಿವರಿಸಿದ್ದರು. ಮಕ್ಕಳಿಗೆ ನೀಡುವ ಉತ್ಪಾದನಾಶೀಲ ಕೆಲಸಗಳು 'ಮಕ್ಕಳು ಅನಗತ್ಯ ದೈಹಿಕ ಆಯಾಸವಿಲ್ಲದೆ ಮಾಡುವಂತಹ ಕೆಲಸಗಳಾಗಿರಬೇಕು.... ದಣಿಸುವ ಕೆಲಸವು ಮೂಲ ಶಿಕ್ಷಣದ ಅಣಕವಾಗುತ್ತದೆ ಹಾಗೂ ಸಂಪೂರ್ಣವಾಗಿ ಅದನ್ನು ಸೋಲಿಸುತ್ತದೆ' ಎಂದು ವಿಶದಪಡಿಸಲು ಸಹ ಅವರು ಸಾಕಷ್ಟು ಶ್ರಮ ತೆಗೆದುಕೊಂಡರು.

ಉತ್ಪಾದನಾಶೀಲ ಕೈಕೆಲಸದ ಬಗೆಗಿನ ಈ ವಿವಾದವು ನಮ್ಮ ಗಮನವನ್ನು ಗಾಂಧಿಯವರ ಶೈಕ್ಷಣಿಕ ಪ್ರಸ್ತಾವನೆಯಲ್ಲಿನ ಪ್ರಮುಖ ಅಂಶದಿಂದ ಬೇರೆಡೆಗೆ ಸೆಳೆಯಬೇಕಾಗಿಲ್ಲ. ಆ ಅಂಶವೇನೆಂದರೆ ಕೆಲಸವನ್ನು ಪಾಲ್ಗೊಳ್ಳುವಿಕೆಯ ಕ್ರಿಯೆಯನ್ನಾಗಿ ಪರಿಕಲ್ಪಿಸುವ ಒಂದು ಕಲ್ಪನೆ. ಗಾಂಧಿಯವರು ಕೆಲಸವನ್ನು ಮಾನವರು ತಮ್ಮ ಭೌತಿಕ ಅಗತ್ಯಗಳನ್ನು ದೊರಕಿಸಿಕೊಳ್ಳಲು ಸಾಧನವಾಗಿ ಮಾತ್ರ ಅಲ್ಲದೆ ಅವರ ಬೌದ್ಧಿಕ, ಸಂವೇಗಾತ್ಮಕ ಹಾಗೂ ಅಧ್ಯಾತ್ಮಿಕ ಅಗತ್ಯಗಳನ್ನು ಪೂರೈಸಿಕೊಳ್ಳುವ ಸಾಧನವಾಗಿ ಭಾವಿಸಿದ್ದರು. ಸಾಮಾಜಿಕ ಅನ್ಯಾಯ ಹಾಗೂ ಶೋಷಣೆಗಳು ಇರುವ ಪರಿಸ್ಥಿತಿಯಲ್ಲಿ ಮಾತ್ರ ಕೆಲಸವು ಕತ್ತೆ ದುಡಿಮೆಯಾಗುತ್ತದೆ ಹಾಗೂ ಜನರನ್ನು ಮಾನವೀಯಗೊಳಿಸುವ ಎಲ್ಲದರ ವಿರುದ್ಧ ಪ್ರಯೋಗಿಸಲಾಗುವ ಒಂದು ಒರಟಾದ ಆಯುಧವಾಗುತ್ತದೆ. ಅಂದರೆ ಒಂದು ಮಗುವನ್ನು ಪಾಲ್ಗೊಳ್ಳುವಿಕೆಯ ಸಂಸ್ಕೃತಿಗೆ ಸಮಾಜೀಕರಣಗೊಳಿಸುವ ಮಾಧ್ಯಮವಾಗುವಂತೆ ವಿಶಾಲ ಅರ್ಥದಲ್ಲಿ ಕೆಲಸವನ್ನು ಮೂಲ ಶಿಕ್ಷಣವು ವ್ಯಾಖ್ಯಾನಿಸಿತು. ವ್ಯಕ್ತಿಗತ ಸ್ವಾಯತ್ತತೆ ಹಾಗೂ ಸಾಮೂಹಿಕ ಜವಾಬ್ದಾರಿಯಲ್ಲಿ ತೊಡಗಿಸಿಕೊಳ್ಳಲು ಒಪ್ಪಿಗೆ ಇವು ಈ ಸಮಾಜೀಕರಣದ ಉದ್ದೇಶಕ್ಕೆ ಅತ್ಯಾವಶ್ಯಕವಾಗಿದ್ದವು.

ಮೂಲ ಶಿಕ್ಷಣದ ಪಾಲ್ಗೊಳ್ಳುವ ಕ್ರಿಯೆಯ ಮೇಲಿನ ಈ ಒತ್ತು ಆಧುನಿಕ ಬೋಧನಾ ವಿಧಾನ (pedagogical)ದ ಸಿದ್ಧಾಂತದೊಂದಿಗೆ ಸುಸಂಗತವಾಗಿತ್ತು. ಅಂದರೆ ಮಕ್ಕಳು ಹೊಸ ಕೌಶಲಗಳು ಹಾಗೂ ಜ್ಞಾನದ ಕಲಿಕೆಯಲ್ಲಿನ ಸಾಧನೆಯು ಕಲಿಕೆಗೆ ಅವರ ಒಪ್ಪಿಗೆ, ಶಿಕ್ಷಕರ ಪರಿಶ್ರಮವನ್ನು ಗೌರವಿಸುವುದು ಹಾಗೂ ತಂಡಗಳಲ್ಲಿ ಕೆಲಸ ಮಾಡುವುದು ಇವುಗಳ ಮೇಲೆಯೇ ಅವಲಂಬಿತವಾಗಿರುತ್ತದೆ ಎಂದು ಅದು ಸೂಚಿಸುತ್ತದೆ. ಗಾಂಧಿಯವರ ಎರಡು ಸಮಕಾಲೀನ ಶ್ರೇಷ್ಠ ವ್ಯಕ್ತಿಗಳಾದ ಟ್ಯಾಗೋರ್ ಹಾಗು ಗಿಜುಭಾಯಿಯವರು ಮಕ್ಕಳ ಒಪ್ಪಿಗೆ ಹಾಗೂ ಪಾಲ್ಗೊಳ್ಳುವಿಕೆಯೇ ಸಹಜವಾಗಿರುವ ಕಲಿಕೆಯ ಸಾಂಸ್ಥಿಕ ಮಾದರಿಗಳನ್ನು ಸ್ಥಾಪಿಸಲು ತಮ್ಮನ್ನೇ ಮುಡುಪಾಗಿಸಿಕೊಂಡರು.

ನಮ್ಮ ಇಂದಿನ ಶಿಕ್ಷಣ ವ್ಯವಸ್ಥೆಯು ಅದರ ಗುರಿಗಳನ್ನು ಮುಟ್ಟಲು ಸಾಮಾನ್ಯವಾಗಿ ವಿಫಲವಾಗುತ್ತದೆ; ಏಕೆಂದರೆ ಸಾಂಸ್ಥಿಕ ವಾತಾವರಣ, ಪಠ್ಯಕ್ರಮ, ತರಗತಿಯ ಗಾತ್ರ ಹಾಗೂ ಕಲಿಸುವ ವಿಧಾನ ಯಾವುವೂ

ಶಿಕ್ಷಣದಲ್ಲಿ ಮಕ್ಕಳ ಪಾತ್ರವನ್ನು ಪರಿಗಣಿಸುವುದಿಲ್ಲ. ಆಶಯದ ಹೇಳಿಕೆಗಳಲ್ಲಿ ಸಾಮಾನ್ಯವಾಗಿ ಕಾಣುವ ತಪ್ಪು ನಂಬಿಕೆಗಳೆಂದರೆ ಶಿಕ್ಷಕರು ಮಕ್ಕಳನ್ನು ಕ್ರಿಯಾಶೀಲರನ್ನಾಗಿಸಬೇಕು ಎಂಬುದು. ಅಂತಹ ಹೇಳಿಕೆಗಳು ಮಕ್ಕಳ ಸಹಜ ಸ್ವಭಾವವಾಗಿರುವ ಕ್ರಿಯಾಶೀಲತೆಯನ್ನು ನಾವು ಕಡೆಗಣಿಸುತ್ತಿರುವುದನ್ನು ಅಥವಾ ಅದರ ಬಗ್ಗೆ ನಮಗಿರುವ ಅಜ್ಞಾನವನ್ನು ತೋರಿಸುತ್ತದೆ. ಕ್ರಿಯಾಶೀಲರಾಗಿರುವ ಮಕ್ಕಳ ಸಹಜ ಬಯಕೆಯನ್ನು ಅದುಮುವುದರ ಬದಲು ಔಪಚಾರಿಕವಲ್ಲದ ಕ್ರಿಯೆಯ ಮೂಲಕ ಆ ಬಯಕೆಯನ್ನು ಹೆಚ್ಚಿಸಿಕೊಳ್ಳಲು ಸಾಧನ ಮತ್ತು ಅವಕಾಶಗಳನ್ನು ನೀಡುವುದನ್ನು ಖಚಿತಪಡಿಸುವುದಷ್ಟೇ ಶಾಲೆಗಳು ಮಾಡಬೇಕಾದ ಕೆಲಸ.

ಶಾಲೆಗಳು ಮಕ್ಕಳಿಗೆ ಕೌಶಲಯುಕ್ತವಾದ ಕೈಕೆಲಸವನ್ನು ಮಾಡಲು ಅವಕಾಶ ಹಾಗೂ ಸಾಧನವನ್ನು ಒದಗಿಸಬೇಕು ಎಂಬ ಕಲ್ಪನೆಯು ಸ್ಪಷ್ಟವಾಗಿ ಕೇವಲ ಸಾಂಪ್ರದಾಯಿಕವಾಗಿ ಶಾಲೆಗಳು ನೀಡುತ್ತ ಬಂದಿರುವ ಬೌದ್ಧಿಕ ಜ್ಞಾನವನ್ನು ಕಟ್ಟಿಕೊಡುವುದಕ್ಕೆ ಮಾತ್ರ ಅಲ್ಲ, ಬದಲು ಮಕ್ಕಳ ಮನಸ್ಸುಗಳಲ್ಲಿ ಕೆಲಸದ ಘನತೆಯ ಕಲ್ಪನೆಯನ್ನು ಕಟ್ಟಿಕೊಡುವುದಾಗಿತ್ತು. ಆದರೆ ಶಾಲೆಯ ಸುಸ್ಥಿತಿಗೆ ಸಂಬಂಧಿಸಿದಂತ ದೈನಂದಿನ ಕೆಲಸಗಳ ಸಂದರ್ಭದಲ್ಲಿ ಕೈಕೆಲಸವು ವಿಶೇಷವಾಗಿ ಮಕ್ಕಳಲ್ಲಿ ಅಸಡ್ಡೆ ಹಾಗೂ ವೈಯಕ್ತಿಕ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಇರುವ ಹಿಂಜರಿಕೆಯನ್ನು ಹೋಗಲಾಡಿಸಿ ಅದರ ಬದಲು ಮುಂದಾಳತ್ವವನ್ನು ತೆಗೆದುಕೊಳ್ಳುವುದನ್ನು ಪ್ರೋತ್ಸಾಹಿಸುವ ಸಲುವಾಗಿಯೂ ವಿನ್ಯಾಸಗೊಳಿಸಲಾಗಿತ್ತು. ಕೇವಲ ಅವರ ಶೈಕ್ಷಣಿಕ ಪ್ರಸ್ತಾಪ ಅಲ್ಲದೆ ಗಾಂಧಿಯವರ ಬದುಕು ಸಹ ವಸಾಹತು ಆಳ್ವಿಕೆಗೊಳಗೊಂಡ ಜನರಲ್ಲಿ ಆಯ್ಕೆ ಮತ್ತು ಮುಂದಾಳತ್ವದಲ್ಲಿ ನಂಬಿಕೆ ಹೊಂದುವ ಧೈರ್ಯವನ್ನು ಎಚ್ಚರಗೊಳಿಸುವುದೇ ಅವರ ಅಂತಿಮ ಧ್ಯೇಯ ಆಗಿತ್ತು ಎಂಬುದನ್ನು ತೋರಿಸುತ್ತದೆ. ವಸಾಹತುಶಾಹಿ ಆಳ್ವಿಕೆಯ ಹಿನ್ನೆಲೆಯಲ್ಲಿ ಈ ನಂಬಿಕೆಯನ್ನು ಜಾಗೃತಗೊಳಿಸಲು ಯಶಸ್ವಿಯಾದ ಗಾಂಧಿಯವರು ಆಯ್ಕೆಯ ವ್ಯಾಪ್ತಿಯನ್ನು ಅದು ಕೈಕೆಲಸದ ಬಗ್ಗೆ, ಅದರಲ್ಲೂ ಮುಖ್ಯವಾಗಿ ಚೊಕ್ಕಮಾಡುವ ಕೆಲಸದ ಬಗ್ಗೆ ಸಾಂಸ್ಕೃತಿಕವಾಗಿ ಬೇರೂರಿದ್ದ ಸಹಜ ಹೇವರಿಕೆಯ ಧೋರಣೆಯು ಬದಲಾಗುವುದನ್ನು ಒಳಗೊಳ್ಳುವಂತೆ ವಿಸ್ತರಿಸಿದರು.

ಇರುವ ಸ್ಥಿತಿಯನ್ನು ಒಪ್ಪಿಕೊಳ್ಳುವ ಮನೋಭಾವನೆಯನ್ನು ನಿರಾಕರಿಸಬೇಕು ಎಂಬುದು ಗಾಂಧಿಯವರ ಸಂದೇಶ. ತನ್ನ ಕೆಲಸಕ್ಕೆ ವೈಯಕ್ತಿಕ ಜವಾಬ್ದಾರಿ ತೆಗೆದುಕೊಳ್ಳುವುದರೆಡೆಗೆ ಇದು ಮೊದಲ ಹೆಜ್ಜೆಯಾಗುತ್ತದೆ. ಬೋಧನಾ ವಿಧಾನ ಸಿದ್ಧಾಂತದ ಪರಿಭಾಷೆಯಲ್ಲಿ ಹೇಳುವುದಾದರೆ, ಇದು ಪರರು ವಿಧಿಸುವ ಕಟ್ಟಳೆಗಳನ್ನು ಪಾಲಿಸಬೇಕು ಎಂಬುದರ ಅಗತ್ಯತೆಯ ಬದಲು ವೈಯಕ್ತಿಕ ಉತ್ಕಟೇಚ್ಛೆಯಿಂದಲೇ ಜವಾಬ್ದಾರಿಯ ಭಾವವನ್ನು ಹೊಂದಲು ಮಕ್ಕಳಿಗೆ ಅಭ್ಯಾಸ ಮಾಡಿಸಬೇಕು ಎಂದು ಸೂಚಿಸುತ್ತದೆ. ಸಾಂಸ್ಥಿಕ ಲಕ್ಷಣವು ಅಂತಹ ಅಭ್ಯಾಸವನ್ನು ಹುಟ್ಟುಹಾಕಲು ಪ್ರಮುಖ ಸಾಧನವಾದರೂ ಪಠ್ಯಕ್ರಮವು ಈ ಗುರಿಯನ್ನು ಅಕ್ಷರಜ್ಞಾನ ಅಥವಾ ಸಂಖ್ಯಾಜ್ಞಾನಕ್ಕಿಂತಲೂ ಹೆಚ್ಚು ಮುಖ್ಯವಾದ ಅಧಿಕೃತ ಉದ್ದೇಶವನ್ನಾಗಿ ಎತ್ತಿಹಿಡಿಯಬೇಕು.

ಗಾಂಧಿಯವರ 'ಹೊಸ ಶಿಕ್ಷಣ' ಕ್ಕೆ ಮತ್ತೊಮ್ಮೆ ಈ ಕಾಲಮಾನದಲ್ಲಿ ಕಿವಿಗೊಡುವುದು ಸ್ವಾಯತ್ತತೆ (autonomy) ಹಾಗೂ ಉಪಕ್ರಮತೆ (initiative) ಯನ್ನು ಶಿಕ್ಷಕರ ದೃಷ್ಟಿಕೋನದಿಂದಲೂ ನೋಡುವುದನ್ನು ಅಗತ್ಯವಾಗಿಸುತ್ತದೆ. ಸ್ವತಃ ಶಿಕ್ಷಕರೇ ಸ್ವಾಯತ್ತತೆಯನ್ನು ಚಲಾಯಿಸುವ ಅಭ್ಯಾಸವಿರದ ಅವರು ಮಕ್ಕಳನ್ನು ಸ್ವಾಯತ್ತತೆಯುಳ್ಳ ವ್ಯಕ್ತಿಗಳಾಗಿರಲು ಪ್ರೋತ್ಸಾಹಿಸುವರು ಎಂಬುದನ್ನು ಕಲ್ಪಿಸಿಕೊಳ್ಳುವುದೂ ಅಸಾಧ್ಯ. ಸ್ವತಂತ್ರವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ ಹಾಗೂ ವೈಯಕ್ತಿಕ ಜವಾಬ್ದಾರಿಯನ್ನು ತೆಗೆದುಕೊಳ್ಳುವ ಅಪೇಕ್ಷೆಯು ಶಿಕ್ಷಕರ ತರಬೇತಿಯಲ್ಲಿ ಪ್ರಮುಖ ಧ್ಯೇಯಗಳಾಗಿರಬೇಕು. ಆದಾಗ್ಯೂ, ಇದು. ಅಂತಹ ಉದ್ದೇಶಗಳಲ್ಲಿನ ತರಬೇತಿಯು ವಾಸ್ತವವಾಗಿ ಅವುಗಳನ್ನು ಕಾರ್ಯರೂಪಕ್ಕೆ ತರುವುದನ್ನು ಖಚಿತಪಡಿಸಲು ಸಾಕಾಗದು. ಪ್ರಾಥಮಿಕ ಹಂತದ ಶಿಕ್ಷಕರು ಕೆಲಸ ಮಾಡುವ ಭೌತಿಕ ಸ್ಥಿತಿಗಳು, ಅವರ ವೃತ್ತಿ ಬದುಕನ್ನು ರೂಪಿಸುವ ನಿಯಮ-ರಚನೆಗಳು ಹಾಗೂ ಆಡಳಿತಾತ್ಮಕ ಅಗತ್ಯಗಳನ್ನು ಪೂರೈಸಲು ಸಲುವಾಗಿ

ಶಿಕ್ಷಕರು ಭೇಟಿಯಿಡಲೇ ಬೇಕಾದಂತಹ ಕಚೇರಿಗಳ ಸಂಸ್ಕೃತಿ - ಇವೆಲ್ಲವೂ ಗಾಂಧಿಯವರು ವಿರೋಧಿಸಿ ಹೋರಾಡಿದ ವಸಾಹತು ಆಳ್ವಿಕೆಯ ಬಳುವಳಿಯ ಪ್ರಮುಖ ಭಾಗವಾಗಿದೆ.

ಶಿಕ್ಷಕರ ಜೀವನ ಹಾಗೂ ವೃತ್ತಿಜೀವನವನ್ನು ನಿಯಂತ್ರಿಸುವ ಆಡಳಿತದ ದಿನಚರಿ ಹಾಗೂ ನಿಯಮಗಳು ಇವತ್ತಿಗೂ ಸಹ ಸ್ವತಂತ್ರವಾಗಿ ಚಿಂತನೆ ಮಾಡುವುದನ್ನು ಹಾಗೂ ಕುಶಾಗ್ರಮತಿಯನ್ನು ಬಹುತೇಕ ನಿಷೇಧಿಸುತ್ತದೆ. ಹೊಸ ಹೊಸ ಚಿಂತನೆಗಳಿಗೇ ಪ್ರಾಶಸ್ತ್ಯ ಎಂದು ತೋರಿಕೆಗೆ ಹೇಳುತ್ತಿದ್ದರೂ ಕೂಡ ಸಂಪೂರ್ಣವಾಗಿ ಶೈಕ್ಷಣಿಕ ವಿಷಯಗಳಾದಂತಹ ಪಠ್ಯಕ್ರಮ ರಚನೆ ಹಾಗೂ ಬೋಧನಾ ಸಾಮಗ್ರಿಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಕೂಡ ಹಳತಾದ ಕಾರ್ಯವಿಧಾನಗಳು ಹಾಗೂ ನಿರೀಕ್ಷೆಗಳು ಇನ್ನೂ ತಮ್ಮ ಪ್ರಭಾವವನ್ನು ಬೀರುತ್ತಲೇ ಇವೆ. ಸಾಮಾನ್ಯವಾಗಿ ತಾವು ತೆಗೆದುಕೊಂಡ ಹೊಸ ಹೆಜ್ಜೆಗೆ ಸ್ವಾಗತ ಅಥವಾ ಬೆಂಬಲ ಸಿಗಲಿಲ್ಲವೆಂದು ಕಂಡುಕೊಂಡಾಗ ಯುವ ಶಿಕ್ಷಕರು ಆಘಾತಕ್ಕೊಳಗಾಗುತ್ತಾರೆ. ಮೂಲ ಶಿಕ್ಷಣವನ್ನು ವ್ಯಾಪಕವಾಗಿ ಅಳವಡಿಸಿಕೊಳ್ಳಲಾಗಿದ್ದ 50ರ ದಶಕದಲ್ಲಿ, ಪರಿವೀಕ್ಷಣಾ (inspectorial) ರೀತಿ ಮತ್ತು ಕಾರ್ಯವಿಧಾನಗಳು ಶೈಕ್ಷಣಿಕ ಬದಲಾವಣೆಗೆ ಸಮಸ್ಯಾತ್ಮಕ ಹಾಗೂ ದೋಷಯುಕ್ತವಾಗಿವೆ ಎಂದು ಕಂಡುಬಂದಿತು. ಪಠ್ಯಪುಸ್ತಕ ಆಧರಿತ ಬೋಧನೆಯ ಹೊರತಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಪ್ರಯತ್ನಿಸಿದ ಶಿಕ್ಷಕರು ಅತ್ಯುತ್ಸಾಹಿಗಳೆಂದು ಟೀಕೆಗೊಳಗಾದರು. ಇಂದಿಗೂ ಕೂಡ ಪರಿವೀಕ್ಷಕರ ನಿರೀಕ್ಷೆಗಳು ಪಠ್ಯಕ್ರಮವನ್ನು ಮುಗಿಸುವ ಹಳತಾದ ಹಿಂದಿನ ವಿಧಾನಕ್ಕೆ ಆತುಕೊಂಡಿದೆ. ಈ ಎರಡು ಬಗೆಯ ರೀತಿಗಳೂ ಸಂಪೂರ್ಣ ಭಿನ್ನವಾಗಿದ್ದು ಎರಡನ್ನೂ ಒಂದೇ ಮಾನದಂಡಗಳನ್ನು ಬಳಸಿ ಮಾಪನ ಮಾಡಲಾಗದು ಎಂದು ಅರಿಯುವಲ್ಲಿ ಶಿಕ್ಷಕರಿಗಿಂತಲೂ ಹೆಚ್ಚಾಗಿ ಮೇಲ್ವಿಚಾರಣಾ ಅಧಿಕಾರಿಗಳು ವಿಫಲರಾಗುತ್ತಾರೆ.

ಗಾಂಧಿಯವರ ಬಳುವಳಿಯನ್ನು ನಾವು ಪುನಃ ಕಂಡುಕೊಂಡು ಇಂದಿನ ಕಾಲಮಾನಕ್ಕೆ ಅದನ್ನು ಅಳವಡಸಿಕೊಳ್ಳಲು ಅಣಿಗೊಳ್ಳುವಾಗ ಮೂಲ ಶಿಕ್ಷಣದಲ್ಲಿನ ನಮ್ಮ ಹಿಂದಿನ ಅನುಭವಗಳಿಂದ ಕೆಲವು ಪಾಠಗಳನ್ನು ತೆಗೆದುಕೊಂಡರೆ ಅದು ನಮಗೆ ಬಹಳ ಉಪಯುಕ್ತವಾಗಿರುತ್ತದೆ. 60ರ ದಶಕದ ಮೊದಲ ಭಾಗದಲ್ಲಿ ಮೂಲ ಶಿಕ್ಷಣವನ್ನು ಅದರ ಭಾವಿಸಲಾದ ವೈಫಲ್ಯಕ್ಕಾಗಿ ದೇಶದ ವಿವಿಧ ಭಾಗಗಳಲ್ಲಿ ಕೈಬಿಟ್ಟದ್ದನ್ನು ಒಂದು ಕಾಯಂ ಕಪ್ಪುಚುಕ್ಕೆಯಾಗಿ ಪರಿಗಣಿಸಬೇಕಾಗಿಲ್ಲ. ವಾಸ್ತವವಾಗಿ ಯಾವುದೇ ವಿಚಾರದಂತೆಯೇ ಶೈಕ್ಷಣಿಕ ವಿಚಾರಗಳ ಹಣೆಬರಹವೂ ಕೂಡ ಐತಿಹಾಸಿಕ ಸಂದರ್ಭಗಳಿಂದ ಆಕಾರ ಪಡೆಯುತ್ತದೆ. ಇತಿಹಾಸದ ಯಾವುದೋ ಒಂದು ಸನ್ನಿವೇಶದಲ್ಲಿ ಒಂದು ಚಿಂತನೆಯ ಅಳವಡಿಕೆಯು ಅಷ್ಟೇನೂ ತೃಪ್ತಕರವಾಗಿರಲಿಲ್ಲವೆಂದರೆ ಅದನ್ನು ಹೊಸದಾಗಿ ಪ್ರಯೋಗಮಾಡಲು ಸೂಕ್ತವಲ್ಲವೆಂದು ಪಕ್ಕ ಸರಿಸುವುದು ಮೂರ್ಖತನವಾಗುತ್ತದೆ. ಅದೇನೇ ಇದ್ದರೂ ಮೂಲ ಶಿಕ್ಷಣ ಮೊದಲ ಪ್ರಯತ್ನದಲ್ಲಿ ವಿಫಲಗೊಂಡಿತ್ತು ಎಂಬ ತೀರ್ಮಾನವು ಸಮಸ್ಯಾತ್ಮಕ. ಗಾಂಧಿಯವರ ಕಲ್ಪನೆಯು ಉಚ್ಛ್ರಾಯದಲ್ಲಿದ್ದ ಸಮಯದಲ್ಲಿ ಬಹಳಷ್ಟು ಮೂಲ ಶಿಕ್ಷಣ ಸಂಸ್ಥೆಗಳು ಅತ್ಯುತ್ತಮ ಕಾರ್ಯಕ್ರಮಗಳನ್ನು ನಡೆಸಿದವು ಹಾಗೂ ಕೆಲವು ಸಂಸ್ಥೆಗಳು ಇಂದಿಗೂ ಎಲ್ಲಾ ಸವಾಲುಗಳ ನಡುವೆಯೂ ತಮ್ಮ ಸಮರವನ್ನು ಮುಂದುವರೆಸುತ್ತಿವೆ. ಗುಜರಾತಿನ ಅಧಿಕೃತ ನೀತಿಯಲ್ಲಿ ಮೂಲ ಶಿಕ್ಷಣವು ಈಗಲೂ ಒಂದು ಭಾಗವಾಗಿದೆ. ಪಶ್ಚಿಮ ಬಂಗಾಳದ ಬುರ್ದ್ವಾನ್ ಜಿಲ್ಲೆಯಲ್ಲಿ 1987 ರಷ್ಟು ಇತ್ತೀಚೆಗೆ ಆಚಾರ್ಯ ಪ್ರಮಥನಾಥ ಮುಖೋಪಾಧ್ಯಾಯ ಅವರ ನೆನಪಿನಲ್ಲಿ ಮೂಲ ಶಿಕ್ಷಣದ ಶಾಲೆಯಾದ ಶಿಕ್ಷಾ ನಿಕೇತನ್ ಆರಂಭಿಸಲಾಯಿತು. ಶಿಕ್ಷಕ ತರಬೇತಿಯ ಹಿನ್ನೆಲೆಯಲ್ಲಿ ವೇಧ್ಛಿಯಲ್ಲಿರುವ ಗಾಂಧಿ ವಿದ್ಯಾಪೀಠ ಹಾಗೂ ಸನೋಸರಾದಲ್ಲಿರುವ ಲೋಕ ಭಾರತಿ ಇವುಗಳು ದೇಶದ ಎಲ್ಲೆಡೆಯೂ ದೊರಕುತ್ತಿರುವ ಸಾಮಾನ್ಯ ತರಬೇತಿಗಿಂತಲೂ ಸಾಕಷ್ಟು ಬೇರೆಯದಾದ ಕಾರ್ಯಕ್ರಮಗಳನ್ನು ನೀಡುವುದರ ಮೂಲಕ ಗಮನಾರ್ಹವಾಗಿ ಭಿನ್ನವೆಂದು ಗುರುತಿಸಲ್ಪಟ್ಟಿವೆ.

40 ಹಾಗೂ 50ರ ದಶಕದಲ್ಲಿ ಮೂಲ ಶಿಕ್ಷಣವು ಅದೊಂದು 'ರಾಷ್ಟ್ರೀಯ' ವ್ಯವಸ್ಥೆಯಾಗಿ ಅದು ಹುಟ್ಟಿಸಿದ್ದ ನಿರೀಕ್ಷೆಗಳನ್ನು ಪೂರೈಸುವಲ್ಲಿ ವಿಫಲವಾಯಿತು ಎನ್ನುವುದು ಸ್ಪಷ್ಟವಾಗಿದೆ. ಅಂತಹ ಒಂದು ಭಾವನೆಯು ಆ

ನಿರೀಕ್ಷೆಗಳ ಸ್ವರೂಪವನ್ನು ಹಾಗೂ ಅದನ್ನು ಪೂರೈಸುವುದರಡೆಗೆ ಮಾಡಿದ ಪರಿಶ್ರಮದ ಸ್ವರೂಪವನ್ನು ಕೂಲಂಕುಶವಾಗಿ ಪರೀಕ್ಷಿಸುವಂತೆ ನಮ್ಮನ್ನು ಪ್ರೇರೇಪಿಸಬೇಕು. ಮೂಲ ಶಿಕ್ಷಣವು ಸಾಮಾಜಿಕ ಪರಿವರ್ತನೆಯನ್ನು ತರುತ್ತದೆ ಎನ್ನುವುದು ಅತಿಮುಖ್ಯ ನಿರೀಕ್ಷೆಯಾಗಿತ್ತು. ಇಂತಹ ವಿಸ್ತಾರವಾದ ಅಲ್ಲದೆ ಅಸ್ಪಷ್ಟ ಆಶಾಭಾವವು ಸಾಕಾರಗೊಳ್ಳಬೇಕೆಂದರೆ ಸಮಾಜೋ-ಆರ್ಥಿಕ ಹಾಗೂ ರಾಜಕೀಯ ವಾತಾವರಣವು ಬೆಂಬಲ ನೀಡುವಂತಿರಬೇಕು ಎಂಬುದು ಒಂದು ಮುಖ್ಯ ಪೂರ್ವಭಾವಿ ಷರತ್ತಾಗುತ್ತದೆ. ನಾವು ಕಲ್ಪಿಸಿಕೊಳ್ಳಬಹುದಾದ ಮತ್ತೊಂದು ಮುಖ್ಯ ಪೂರ್ವಭಾವಿ ಷರತ್ತೆಂದರೆ ದೀರ್ಘಕಾಲದವರೆಗೆ ನಿರಂತರ ಪ್ರಯೋಗ ಪ್ರಯತ್ನವು ನಡೆಯಬೇಕು ಎಂಬುದು. ಮೂಲ ಶಿಕ್ಷಣವು ಅಸಹಕಾರಿಯಾದ ಸಮಾಜೋ-ಆರ್ಥಿಕ ವಾತಾವರಣ ಎದುರಿಸಬೇಕಾಗಿತ್ತು ಹಾಗೂ ಅದು ಪಡೆದ ರಾಜಕೀಯ ಬೆಂಬಲವು ಪ್ರದೇಶದಿಂದ ಪ್ರದೇಶಕ್ಕೆ ಬೇರೆಯಾಗಿತ್ತು ಎಂಬುದನ್ನು ಎಲ್ಲ ಪುರಾವೆಗಳೂ ಸೂಚಿಸುತ್ತವೆ. ವಾಸ್ತವವಾಗಿ ಅನಿಶ್ಚಯ ರಾಜಕೀಯ ಪೋಷಣೆಯು ಸ್ವಾತಂತ್ರ್ಯಾನಂತರ ಹೆಚ್ಚುಕಡಮೆ ಒಂದು ದಶಕಕ್ಕಿಂತಲೂ ಹೆಚ್ಚು ಕಾಲ ಮೂಲ ಶಿಕ್ಷಣವನ್ನು ಉಳಿಸಿಕೊಳ್ಳಲು ಸಾಧ್ಯವಾಗದೇ ಇದ್ದುದ್ದಕ್ಕೆ ಮುಖ್ಯ ಕಾರಣವಾಗಿತ್ತು.

ರಾಜಕೀಯ ಪೋಷಣೆ ಅಷ್ಟೇ ಅಲ್ಲದೆ ಮೂಲ ಶಿಕ್ಷಣಕ್ಕೆ ಜನಪ್ರಿಯ ಮೆಚ್ಚುಗೆಯೂ ಸಹ ಸಾಕಷ್ಟು ಇರಲಿಲ್ಲ. ಈ ವಿಚಾರದ ಬಗ್ಗೆ ಜನರಲ್ಲಿ ಆಸಕ್ತಿಯನ್ನು ಹುಟ್ಟಿಸಲು, ಅದೂ ಮುಖ್ಯವಾಗಿ ಪೋಷಕರು ಸ್ಪಷ್ಟವಾಗಿ ಹೊಂದಿದ್ದ ಸಾಮಾನ್ಯ ಅಪಾರ್ಥಗಳನ್ನು ತೊಡೆದು ಹಾಕುವಲ್ಲಿ ಬಹಳ ಕಡಮೆ ಎನ್ನುವಷ್ಟೇ ಪ್ರಯತ್ನವನ್ನು ಮಾಡಲಾಯಿತು. ಮೂಲ ಶಿಕ್ಷಣದ ಕಲ್ಪನೆಯು ಸರಳವಾಗಿದ್ದು ಎಲ್ಲರೂ ಸುಲಭವಾಗಿ ಅರ್ಥಮಾಡಿಕೊಂಡು ಮೆಚ್ಚಬಲ್ಲರು ಎಂದೇ ಬಹುಶಃ ಭಾವಿಸಲಾಗಿತ್ತು. ಅಲ್ಲದೆ ಇದಕ್ಕೆ ಒಕ್ಕೊರಲ ವಿರೋಧವನ್ನು ಕೂಡ ನಿರೀಕ್ಷಿಸಿರಲಿಲ್ಲ ಎಂದೂ ತೋರುತ್ತದೆ. ಮೂಲ ಶಿಕ್ಷಣವು ಟೀಕೆಗಳಿಗೆ ಗುರಿಯಾದಾಗ ಅದನ್ನು ಒಂದು ನೀತಿಯನ್ನಾಗಿ ಬೆಂಬಲಿಸದ ಕೆಲವರು ಅದನ್ನು ಸಮರ್ಥಿಸಲು ಪ್ರಯತ್ನಿಸಿದರೆ, ಇತರರು ಮೌನವಾಗಿ ತಮ್ಮ ದಿನನಿತ್ಯದ ಕೆಲಸಗಳಿಗೆ ಗಮನಹರಿಸಿದರಷ್ಟೇ. ಮಕ್ಕಳ ಶಿಕ್ಷಣದ ಸಾಂಪ್ರದಾಯಿಕ ಮಾದರಿಗೆ ಪರ್ಯಾಯವಾದ ಯಾವುದನ್ನಾದರೂ ಸೂಚಿಸುವಂತೆ ಮೂಲ ಶಿಕ್ಷಣದ ಟೀಕಾಕಾರರನ್ನು ಕೇಳಿದ ನಿದರ್ಶನ ಸಿಗುವುದು ಕಷ್ಟವೇ.

ಸಾರ್ವತ್ರಿಕ ಸುಧಾರಣೆಯ ದಾರಿದೀಪವಾಗಿ ಗಾಂಧಿಯವರ ಶಿಕ್ಷಣದ ಪರಿಕಲ್ಪನೆಯನ್ನು ಪುನರುಜ್ಜೀವನಗೊಳಿಸಲು ಇಂದು ಅರಿಯಬೇಕಾದ ಒಂದು ಮುಖ್ಯ ಪಾಠ ಇದು: ಗ್ರಹಣಾಕಾಂಕ್ಷಿಯಾದ ಸಾಮಾಜಿಕ-ರಾಜಕೀಯ ವಾತಾವರಣವನ್ನು ಕಟ್ಟಲು ಸಾಕಷ್ಟು ಗಮನವನ್ನು ನೀಡಬೇಕು ಎಂಬುದು. ಹಿಂದಿನ ಘಟನೆಗಳಿಂದ ನಾವು ಕಲಿಯಬಹುದಾದ ಎರಡನೆಯ ಪಾಠವೆಂದರೆ ಅದು ವಿಧಾನಗಳಲ್ಲಿ ನಮ್ಯತೆ ಹಾಗೂ ವೈವಿಧ್ಯತೆ ಇರಬೇಕು ಎಂಬುದು. 50ರ ದಶಕದೆಡೆಗೆ ಹಿಂದಿರುಗಿ ನೋಡಿದಾಗ ಗಾಂಧಿಯವರ ಪ್ರಸ್ತಾವನೆಗೆ ಕಡುಸಾಂಪ್ರದಾಯಿಕ ಅರ್ಥವಿವರಣೆ ಸರ್ವೇಸಾಮಾನ್ಯವಾಗಿದ್ದುದು ಕಂಡುಬರುತ್ತದೆ. ಇದು ಪಠ್ಯಕ್ರಮದ ಆಯ್ಕೆ, ತರಬೇತಿಯ ಕಾರ್ಯವಿಧಾನಗಳು ಹಾಗೂ ಆಡಳಿತ ವ್ಯವಸ್ಥೆಗಳಲ್ಲಿನ ಏಕರೂಪತೆಗಳಲ್ಲಿ ಕಾಣುತ್ತಿತ್ತು. ವಸಾಹತುಶಾಹಿ ಆಳ್ವಿಕೆಯು ಭಾರತದ ಶಾಲೆಗಳ ಮೇಲೆ ಹೇರಿದ್ದ ಏಕರೂಪತೆಯ ಕಟು ಟೀಕಾಕಾರರು ಗಾಂಧಿಯವರೇ ಆಗಿದ್ದರು ಎಂಬುದನ್ನು ಪರಿಗಣಿಸಿದಾಗ ಇದೊಂದು ದೊಡ್ಡ ವಿರೋಧಾಭಾಸವಾಗಿ ಕಾಣುತ್ತದೆ. ಈ ವಿಷಯದಲ್ಲಿ ಮೂಲ ಶಿಕ್ಷಣವು ಶಿಕ್ಷಣ ವ್ಯವಸ್ಥೆಯಲ್ಲಿ ಆಳವಾಗಿ ಬೇರುಬಿಟ್ಟಿದ್ದ ಆಡಳಿತಶಾಹಿ ಸಂಸ್ಕೃತಿಯ ಬಲಿಪಶು ಆಯಿತು.

ಮರುಹುಟ್ಟು ಪಡೆವ ಮೂಲ ಶಿಕ್ಷಣ ಕಾರ್ಯಕ್ರಮದಲ್ಲಿ ಸ್ಥಳೀಯ ಹಾಗೂ ಪ್ರಾದೇಶಿಕ ವೈವಿಧ್ಯತೆಯನ್ನು ಕೇವಲ ಸಹಿಸಿಕೊಳ್ಳುವುದಲ್ಲ, ಬದಲಾಗಿ ಅದನ್ನು ಒಂದು ತತ್ವವಾಗಿ ಪ್ರೋತ್ಸಾಹಿಸಬೇಕು. ವೈವಿಧ್ಯತೆಯ ವಿರುದ್ಧ ನೀತಿ ಹಾಗೂ ಯೋಜನೆಯಲ್ಲಿ ಆಳವಾದ ಪಕ್ಷಪಾತೀಯ ಅಭಿಪ್ರಾಯಗಳು ಇರುವಾಗ ಹಾಗೂ ಇಷ್ಟೊಂದು ವರ್ಷಗಳ ಕಾಲ ಅದನ್ನು ಪ್ರೋತ್ಸಾಹಿಸದೆ ಇರುವಾಗ ವೈವಿಧ್ಯತೆಯನ್ನು ಉತ್ತೇಜಿಸುವುದು ತಕ್ಷಣವೇ (ಒಂದು

ಗುಂಡಿ ಅದುಮುವ ಮೂಲಕ ಆಗುವ ಕೆಲಸದ ಹಾಗೆ) ಆಗುವ ವಿಷಯವಲ್ಲ. ವಾಸ್ತವವಾಗಿ ಸ್ಥಳೀಯ ವಿಧಾನವನ್ನು ರಚಿಸಲು ಅಗತ್ಯವಾದ ಸಾಮರ್ಥ್ಯವು ಬಹಳ ಕಾಲ ಬಳಸದೇ ಇರುವುದರಿಂದ ಶಿಕ್ಷಕರಲ್ಲಿ ಅದು ಬತ್ತಿದೆ. ನಾವು ಇಲ್ಲಿ ಉಲ್ಲೇಖಿಸುತ್ತಿರುವ ಸಾಮರ್ಥ್ಯವು ಕೇವಲ ತರಬೇತಿಯಿಂದ ಬರಲಾರದು, ಅದು ಮನಸ್ಸಿಗೆ ಸಂಬಂಧಿಸಿದ ಪ್ರಯೋಗ ಮಾಡುವ ಅಪೇಕ್ಷೆಗಳಂತಹ ಗುಣಗಳು ಹಾಗೂ ಸಾಂಸ್ಕೃತಿಕವಾಗಿ ದಾಟಿಸಿರುವ ಗುಣಗಳಾದ ಸ್ವಾವಲಂಬನೆ ಮತ್ತು ಅಪಾಯಗಳನ್ನು ಎದುರಿಸುವ ಸ್ಥೈರ್ಯ ಇಂತಹವುಗಳ ಮೇಲೆಯೂ ಸಹ ಅವಲಂಬಿತವಾಗಿದೆ. ವಿಧಾನಗಳಲ್ಲಿನ ವೈವಿಧ್ಯತೆಯು ಒಂದು ವ್ಯವಸ್ಥೆಯ ಭಾಗವಾಗಬೇಕೆಂದರೆ ಅದನ್ನು ನಿರಂತರವಾಗಿ ಪ್ರೋತ್ಸಾಹಿಸಬೇಕು. ವೈವಿಧ್ಯತೆಯನ್ನು ಒಪ್ಪಿಕೊಳ್ಳುವಂತಹ ಒಂದು ವಾತಾವರಣವನ್ನು ಕಟ್ಟುವುದು ಅಂತಹ ಪ್ರೋತ್ಸಾಹದೆಡೆಗೆ ಇಡುವ ಒಂದು ಹೆಜ್ಜೆ.

ದೈನಂದಿನ ಪಠ್ಯ ಚಟುವಟಿಕೆಯನ್ನು ಸಮಾನ ವಿಷಯಗಳ ಸುತ್ತ ವಿಭಿನ್ನವಾಗಿ ಹೊಂದಿಸಿಕೊಳ್ಳುವಲ್ಲಿ ಶಿಕ್ಷಕರಿಗೆ ಸ್ವಾತಂತ್ರ್ಯವನ್ನು ಖಚಿತಪಡಿಸುವಂತಹ ನೀತಿಗೆ ಅಗತ್ಯವಾದ ಒಂದು ಸಕಾರಾತ್ಮಕ ಸಮಾಜಿಕ ಲಕ್ಷಣವನ್ನು ಹುಟ್ಟುಹಾಕಲು ಮೂರು ಪರಿಣತ ಭಾರತೀಯ ತತ್ವಶಾಸ್ತ್ರಜ್ಞರ ಕೃತಿಗಳು ನಮಗೆ ಬಹಳ ಸಹಾಯಕಾರಿಯಾಗಬಲ್ಲವು. ಈ ತತ್ವಜ್ಞಾನಿಗಳೆಂದರೆ ಶ್ರೀ ಅರಬಿಂದೋ, ರವೀಂದ್ರನಾಥ ಟ್ಯಾಗೋರ್ ಹಾಗೂ ಜೆ ಕೃಷ್ಣಮೂರ್ತಿ. ಪುನರುಜೀವನಗೊಂಡ ಮೂಲ ಶಿಕ್ಷಣ ಕಾರ್ಯಕ್ರಮದಲ್ಲಿ ವಿಧಾನಗಳಲ್ಲಿನ ವೈವಿಧ್ಯತೆಯನ್ನು ಉತ್ತೇಜಿಸುವ ಉಪಕ್ರಮದ ಭಾಗವಾಗಿ, ಶಿಕ್ಷಣದ ಬಗೆಗಿನ ಇವರೆಲ್ಲರ ಬರಹಗಳನ್ನು, ಸುಲಭವಾಗಿ ಲಭ್ಯವಿಲ್ಲದ ಈ ಕಾಲಘಟ್ಟದಲ್ಲಿ, ವ್ಯಾಪಕವಾಗಿ ಪಸರಿಸಬೇಕಾಗಿದೆ.

ಕೃಷಿ ಹಾಗು ತೋಟಗಾರಿಕೆಯನ್ನು 'ಕರಕುಶಲ' ವಾಗಿ ಶಾಲೆಯಲ್ಲಿ ಕಲಿಸಲು ಆಯ್ದುಕೊಂಡಾಗಲೇ ಈ ವೈವಿಧ್ಯತೆಯ ಕೊರತೆಯು ಸ್ಪುಟವಾಗಿ ಎದ್ದು ಕಾಣಿಸಿತು. ಈ ಮುಂಚೆ ನಾವು ಚರ್ಚಿಸಿದಂತೆ ಮೂಲ ಶಿಕ್ಷಣದ ಶಾಲೆಗಳು ಆರ್ಥಿಕ ಸ್ವಾವಲಂಬನೆಯೆಡೆಗೆ ಶ್ರಮಿಸಬೇಕೆಂಬ ಅಗತ್ಯದಿಂದಲೇ ಈ ಆಯ್ಕೆ ಒಡಮೂಡಿದ್ದೆಂದು ಕಾಣುತ್ತದೆ. ಕೃಷಿ ಅಥವಾ ತೋಟಗಾರಿಕೆಯ ಚಟುವಟಿಕೆಗಳು ಉಪಯುಕ್ತವಾದ ಉತ್ಪನ್ನಗಳನ್ನು ನೀಡುವ ಜೊತೆಗೆ ಸ್ವಲ್ಪ ಹಣವನ್ನೂ ತರಬಲ್ಲವು ಎಂಬ ಸಂಗತಿಯು ಈ ಬಗೆಯ ಕೈಕೆಲಸವನ್ನು ಕರಕುಶಲತೆ ಎಂದಂತೂ ಕರೆಯಲು ಸಾಧ್ಯವಿಲ್ಲ ಎಂಬುದನ್ನು ಗುರುತಿಸುವುದನ್ನು ಮಬ್ಬುಗೊಳಿಸಿತು.

ವಾದ ಕರಕುಶಲ ಕೆಲಸಗಳಿಗೆ ಅಗತ್ಯವಾದ ನಾಜೂಕುತನ ಹಾಗು ನಿಖರತೆಯ ತರಬೇತಿಯನ್ನು ಕೃಷಿ ಮತ್ತು ತೋಟಗಾರಿಕೆಯು ಒಳಗೊಳ್ಳುವ ಕೈಕೆಲಸದೊಡನೆ ಹಾಗೆ ಸರಳವಾಗಿ ಸಂಬಂಧಿಸಲಾಗದು. ಕೆಲವು ಮೂಲ ಶಿಕ್ಷಣದ ಶಾಲೆಗಳಲ್ಲಿ ಕೃಷಿಯ ಉತ್ಪನ್ನಕ್ಕೆ ನೀಡಿದ ಹೆಚ್ಚಿನ ಪ್ರಾಮುಖ್ಯತೆಯು ಮಕ್ಕಳನ್ನು ಬಾಲ ಕಾರ್ಮಿಕರಾಗಿ ಬಳಸಲಾಗುತ್ತಿದೆ ಎಂಬ ದೂರುಗಳಿಗೆ ಕಾರಣವಾದವು. ಇದು ಈ ಮುಂಚೆಯೇ ಮೂಲ ಶಿಕ್ಷಣ ಶಾಲೆಗಳ ಬಗ್ಗೆ ಇದ್ದ ಪೂರ್ವಗ್ರಹಗಳಿಗೆ ಇಂಬು ನೀಡಿತು. ಬಾಲ್ಯದಲ್ಲಿ ಕರಕುಶಲತೆಯನ್ನು ಕಲಿಯುವಾಗ ಪಡೆಯುವ ಆನಂದ ಹಾಗೂ ಅದು ವೃದ್ಧಿಸಬಲ್ಲ ಜ್ಞಾನೇಂದ್ರಿಯಗಳ ಸೂಕ್ಷ್ಮತೆಯನ್ನು ಉತ್ಪಾದನೆ ಕೇಂದ್ರಿತವಾದ ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗಿ ಸಮೀಕರಿಸಲು ಸಾಧ್ಯವಿಲ್ಲ.

ಸ್ವಾತಂತ್ರ್ಯಾನಂತರದ ಮೂಲ ಶಿಕ್ಷಣ ಕಾರ್ಯಕ್ರಮಕ್ಕೆ ಬಿದ್ದ ಮತ್ತೊಂದು ದೊಡ್ಡ ಹೊಡೆತವೆಂದರೆ ದೇಶದ ಕೆಲವೆಡೆ ಅದನ್ನು ಅಳವಡಿಸಿಕೊಂಡಿದ್ದ ಶಾಲೆಗಳಿಗೆ ಉನ್ನತ ಶಿಕ್ಷಣಕ್ಕೆ ಹಾಗೂ ಪರೀಕ್ಷೆಗಳಿಗೆ ಅನುಮತಿಯನ್ನು ನಿರಾಕರಿಸಿದ್ದು. ಈ ರಾಚನಿಕ ಸಮಸ್ಯೆಯು ಮೂಲ ಶಿಕ್ಷಣ ಶಾಲೆಗಳಲ್ಲಿ ಕಲಿಯುತ್ತಿದ್ದ ಮಕ್ಕಳಿಗೆ ಲಭ್ಯವಿರುವ ಮುಂದಿನ ಆಯ್ಕೆಗಳನ್ನು ಬಹಳ ಮಿತಗೊಳಿಸಿತು. ಇತರ ಶಾಲೆಗಳಲ್ಲಿದ್ದ ಪಠ್ಯಕ್ರಮ ಹಾಗೂ ಪಠ್ಯಪುಸ್ತಕಗಳನ್ನು ಈ ಮಕ್ಕಳು ಬಳಸಿಲ್ಲ ಎನ್ನುವ ವಾದವೇ ಅವರ ಕಲಿಕೆಯನ್ನು ಮಾನ್ಯ ಮಾಡುವುದನ್ನು ನಿರಾಕರಿಸಲು ಕಾರಣವಾಯಿತು. ಮೂಲ ಶಿಕ್ಷಣ ಶಾಲೆಗಳಲ್ಲಿ ಭಾರತೀಯ ಶಾಲಾ ವ್ಯವಸ್ಥೆಯಲ್ಲಿ ವಿಧಿಸಿದ ಪಠ್ಯಪುಸ್ತಕಕ್ಕಿದ್ದ ಕೇಂದ್ರ ಸ್ಥಾನವನ್ನು ಬದಿಗೆ

ಸರಿಸುವ ಅದರ ಪ್ರಯತ್ನವೇ ರಾಜ್ಯಗಳ ಶಿಕ್ಷಣ ಇಲಾಖೆಗಳ ಕಛೇರಿಗಳಲ್ಲಿ ಅವುಗಳ ಬಗೆಗಿದ್ದ ಅಭಿಪ್ರಾಯವು ಅತ್ಯಂತ ಏಕೈಕ ದೊಡ್ಡ ಸಮಸ್ಯೆ ಎನಿಸಿಬಿಟ್ಟಿತು. ಮೂಲ ಶಿಕ್ಷಣ ಶಾಲೆಗಳ ಶಿಕ್ಷಕರಿಗೆ ಸ್ವತಃ ತಾವೇ ತಮ್ಮ ದೈನಂದಿನ ಪಠ್ಯ ಚಟುವಟಿಕೆಗಳನ್ನು ಹಾಗೂ ಸಾಮಗ್ರಿಗಳನ್ನು ತಯಾರಿಸಿಕೊಳ್ಳುವಂತೆ ತರಬೇತಿ ನೀಡಲಾಯಿತು. ಕೆಳಗಿನ ತರಗತಿಗಳಲ್ಲಿ ಅವರು ಪಠ್ಯಪುಸ್ತಕಗಳನ್ನು ಬಳಸುವದನ್ನು ತಪ್ಪಿಸಬೇಕು ಎಂದಿದ್ದರೆ ಮೇಲಿನ ತರಗತಿಗಳಲ್ಲಿ ಸಾಧ್ಯವಾದಷ್ಟು ಕಡಮೆ ಬಳಸಬಹುದಾಗಿತ್ತು. ಈ ಕಾರ್ಯರೀತಿಯಲ್ಲಿ ಅವರು ಪಠ್ಯಪುಸ್ತಕ ಆಧಾರಿತ ಬೋಧನೆ ತಮಗೆ ಹಿಡಿಸದ ವಿಷಯವೆಂದು ಗಾಂಧಿಯವರು ವ್ಯಕ್ತಪಡಿಸಿದ್ದನ್ನು ಅನುಸರಿಸುತ್ತಿದ್ದರು. ಇದು ಸ್ಪಷ್ಟವಾಗಿ ಗಾಂಧಿಯವರ ವಸಾಹತು ಶಿಕ್ಷಣದ ಸಹಜ ನಿರಾಕರಣೆಯ ಭಾಗವೇ ಆಗಿದ್ದಿತು. ಗಾಂಧಿಯವರು, "ಪಠ್ಯಪುಸ್ತಕಗಳು ಕಲಿಕೆಯ ವಾಹಕಗಳಾಗಿ ಪರಿಗಣಿಸಿದರೆ, ಶಿಕ್ಷಕರು ಬದುಕುತ್ತಿರುವ ಜಗತ್ತಿಗೆ ಮೌಲ್ಯವೇ ಇಲ್ಲವಾಗುತ್ತದೆ. ಯಾವ ಶಿಕ್ಷಕರು ಪಠ್ಯಪುಸ್ತಕದಿಂದ ಪಾಠಹೇಳುತ್ತಾರೋ ಅವರು ತಮ್ಮ ಮಕ್ಕಳಲ್ಲಿ ಸ್ವಂತಿಕೆಯನ್ನು ಬಿತ್ತುವುದಿಲ್ಲ. ತಾನೇ ಪಠ್ಯಪುಸ್ತಕಗಳ ಗುಲಾಮನಾಗುತ್ತಾನೆ ಮತ್ತು ಆ ಕಾರಣದಿಂದಾಗಿ ಸ್ವಂತಿಕೆಯಿಂದಿರಲು ಅವಕಾಶವಾಗಲೀ ಅಥವಾ ಸಂದರ್ಭವಾಗಲೀ ಇರುವುದೇ ಇಲ್ಲ. ಆದ್ದರಿಂದ ಪಠ್ಯಪುಸ್ತಕಗಳು ಕಡಮೆ ಇದ್ದಷ್ಟು ಶಿಕ್ಷಕರು ಮತ್ತು ಮಕ್ಕಳಿಗೆ ಒಳ್ಳೆಯದು." ಆದರೆ ಪಠ್ಯಪುಸ್ತಕಗಳಿಲ್ಲದೇ ಕಲಿಸುವುದು ಪರಿವೀಕ್ಷಣಾ ಆಡಳಿತಶಾಹಿಗಳಲ್ಲಿ ಕಳವಳ ಹುಟ್ಟಿಸಿತು, ಮತ್ತು ಅದು ಮೂಲ ಶಿಕ್ಷಣ ಶಾಲೆಗಳು ಇತರ ಶಾಲೆಗಳಂತೆ ಮಾನ್ಯತೆಯನ್ನು ಪಡೆಯುವಲ್ಲಿ ಅಷ್ಟೊಂದು ತೊಂದರೆಗೊಳಗಾಗಿದಕ್ಕೆ ಒಂದು ಕಾರಣವಾಗಿತ್ತು.

ಹೊಸತನದ ಕೆಲಸಗಳಲ್ಲಿ ತೊಡಗಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳು ನಿಗದಿಪಡಿಸಿದ ಪಠ್ಯಪುಸ್ತಕಗಳನ್ನು ಇತರ ಸಾಮಗ್ರಿಗಳಿಂದ ಬದಲಾಯಿಸಲು ಪ್ರಯತ್ನಿಸುವಾಗ ಅವು ಸಮಸ್ಯೆಗಳನ್ನು ಎದುರಿಸುತ್ತವೆ. ತಾವು ಮಾಡುತ್ತಿರುವ ಕೆಲಸವು ಪಠ್ಯಪುಸ್ತಕಗಳೊಡನೆ ಇತರ ಸಾಮಾನ್ಯ ಶಾಲೆಗಳು ಮಾಡುತ್ತಿರುವ ಕೆಲಸಗಳಷ್ಟೇ ಗಂಭೀರವಾದವು ಎಂದು ಆಡಳಿತಶಾಹಿಯನ್ನು ಒಪ್ಪಿಸಲು ಇವತ್ತಿಗೂ ಸಹ ಅವು ಪ್ರಯಾಸ ಪಡಬೇಕು. ಸ್ಪಷ್ಟವಾಗಿ, ಪಠ್ಯಪುಸ್ತಕಗಳನ್ನು ನಿಗದಿಪಡಿಸುವ ವಸಾಹತುಶಾಹಿ ಅಭ್ಯಾಸವು ಇಂದಿಗೂ ಶಿಕ್ಷಣ ವ್ಯವಸ್ಥೆಯಲ್ಲಿ ಹಾಗೂ ಅದು ಸೇವೆ ಸಲ್ಲಿಸುವ ಸಮಾಜದಲ್ಲಿ ಒಂದು ಆಳವಾದ ಮಾನಸಿಕ ಕಾರ್ಯವನ್ನು ಪೂರೈಸುತ್ತಿದೆ. ಬೋಧನೆಯು ನಿಗದಿತ ಪಠ್ಯಪುಸ್ತಕದ ಆಧಾರದ ಮೇಲೆ ಇಲ್ಲದಿರುವುದನ್ನು ಕಂಡಾಗ ಪೋಷಕರು ಅದರ ಗುಣಮಟ್ಟದ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾರೆ. ಆರ್ಥಿಕವಾಗಿ ದುರ್ಬಲ ವರ್ಗದ ಪೋಷಕರಂತೂ ವಿಶೇಷವಾಗಿ ಇಂತಹ ಬೋಧನೆಯ ಬಗ್ಗೆ ಗುಮಾನಿ ಪಡುವುದು ಅರ್ಥಮಾಡಿಕೊಳ್ಳಬಹುದಾಗಿದೆ; ಏಕೆಂದರೆ ಅವರ ಮನೆಗಳಲ್ಲಿ ಕಂಡುಬರುವ ಪುಸ್ತಕಗಳು ಶಾಲಾ ಪಠ್ಯಪುಸ್ತಕಗಳಷ್ಟೇ. ಪಠ್ಯಪುಸ್ತಕವು ವಿಶ್ವಾಸಾರ್ಹತೆಯ ಮತ್ತು ಅಧಿಕೃತ ಜ್ಞಾನದ ಪ್ರತೀಕಗಳಾಗಿವೆ, ಪರೀಕ್ಷೆಗಳು ಇದರ ಆಧಾರದ ಮೇಲೆ ಇರುವುದು ಅದರ ಅನಿವಾರ್ಯತೆಯ ಅಂತಿಮ ಪುರಾವೆಯಾಗಿದೆ. ಹೀಗೆ, ನಿಗದಿಪಡಿಸಿದ ಪಠ್ಯಪುಸ್ತಕವು ಶಿಕ್ಷಣ ವ್ಯವಸ್ಥೆಯನ್ನು ನಿಯಂತ್ರಿಸುತ್ತಿರುವ ಸಂಬಂಧಗಳ ರಚನೆಯ ಕೇಂದ್ರಬಿಂದುವಾಗಿದೆ.

ಶಿಕ್ಷಕರು ತಮ್ಮದೇ ಆದ ದೈನಂದಿನ ಪಠ್ಯಕ್ರಮವನ್ನು ಯೋಜಿಸಿ ಅದಕ್ಕೆ ತಕ್ಕ ಸಾಮಗ್ರಿಗಳನ್ನು ಅಣಿಗೊಳಿಸಿಕೊಳ್ಳಲು ಅವರಿಗೆ ತರಬೇತಿ ನೀಡಿ ಪ್ರೇರೇಪಿಸಲು ಮೂಲ ಶಿಕ್ಷಣದ ಹಿಂದಿನ ಅನುಭವವು ನಮಗೆ ಅತ್ಯುತ್ತಮವಾದ ಮಾರ್ಗದರ್ಶನವನ್ನು ಒದಗಿಸುತ್ತದೆ. ಪಠ್ಯಪುಸ್ತಕಗಳನ್ನು ತೊಡೆದುಬಿಟ್ಟರೆ ಅಥವಾ ಕೀಳುಗೈದರೆ ಶಿಕ್ಷಣದಲ್ಲಿನ ಇಂತಹ ಪ್ರಶಂಸನೀಯ ಬದಲಾವಣೆಗಳು ಪೋಷಕರು ಹಾಗೂ ಅಧಿಕಾರಿಗಳಲ್ಲಿ ತಪ್ಪುಕಲ್ಪನೆಗಳನ್ನು ಬಿತ್ತುತ್ತವೆ ಎಂದು ಇದೇ ಹಿಂದಿನ ಅನುಭವಗಳು ನಮ್ಮನ್ನು ಎಚ್ಚರಿಸುತ್ತವೆ. ನಾವು ಈ ಸಮಸ್ಯೆಗೆ ಪರಿಹಾರ ಹುಡುಕಲು ಪಠ್ಯಪುಸ್ತಕವನ್ನೇ ಮೊರೆಹೋಗಬೇಕು. ಶಿಕ್ಷಕರ ಕೆಲಸವನ್ನು ಪಠ್ಯಪುಸ್ತಕಗಳು ಕೀಳುಗೊಳಿಸುತ್ತವೆ ಎಂದು ಗಾಂಧಿಯವರು ಕಂಡುಕೊಂಡಂತೆ ಅಥವಾ ಅವು ಕ್ರಿಯಾಶೀಲರಾಗಿರಬೇಕು ಎಂಬುವ ಮಕ್ಕಳ ಸಹಜ ಹಂಬಲವನ್ನು ಕಡಮೆಗೊಳಿಸುತ್ತವೆ ಎಂದು ಪ್ರತಿಪಾದಿಸಲು ಯಾವುದೇ ಸೈದ್ಧಾಂತಿಕ ಕಾರಣಗಳಿಲ್ಲ.

ಪಠ್ಯಪುಸ್ತಕಗಳು ನಿಜಕ್ಕೂ ಇಂತಹ ಘೋರ ಪರಿಣಾಮಗಳನ್ನುಂಟು ಮಾಡಿದರೆ ಆ ದೋಷಕ್ಕೆ ಕಾರಣ ಹೆಚ್ಚಾಗಿ ಸ್ವತಃ ಪಠ್ಯಪುಸ್ತಕದ್ದೇ ಆಗಿರುತ್ತದೆ ಹಾಗೂ ಆ ಪಠ್ಯಪುಸ್ತಕ ಆಧರಿಸಿರುವ ಪಠ್ಯಕ್ರಮದ್ದೇ ಆಗಿರುತ್ತದೆ.

ಮಕ್ಕಳ ಮೇಲಿನ ಪಠ್ಯದ ಹೊರೆಯಿಂದ ಉಂಟಾಗಿರುವ ವಿಸ್ತೃತ ಸಮಸ್ಯೆಗಳನ್ನು ಪರಿಶೀಲಿಸಲು ಮೂರು ವರ್ಷಗಳ ಹಿಂದೆ ಭಾರತ ಸರ್ಕಾರವು ನೇಮಿಸಿದ ಯಶ್ಪಾಲ್ ಸಮಿತಿಯ ವರದಿಯು ಕಲಿಕೆಯಲ್ಲಿ ಮಕ್ಕಳ ಆಸಕ್ತಿ ಹಾಗೂ ಪಾಲ್ಗೊಳ್ಳುವಿಕೆಯನ್ನು ಉದ್ದೀಪಿಸಲು ಭಾರತದ ಪಠ್ಯಪುಸ್ತಕಗಳು ಬಹಳವೇ ಕೊರತೆಯನ್ನು ಹೊಂದಿವೆ ಎಂದು ಕಂಡುಕೊಂಡಿತು. ಈ ವರದಿಯು ಸೂಚಿಸುವಂತೆ ಮಕ್ಕಳು ತಮ್ಮ ಸುತ್ತಲಿನ ಪ್ರಪಂಚವನ್ನು ಗಮನಿಸುವುದನ್ನು ಅಥವಾ ಉದ್ದೇಶಪೂರಿತ ಚಟುವಟಿಕೆಯಲ್ಲಿ ತೊಡಗುವುದನ್ನು ನಮ್ಮ ಪಠ್ಯಪುಸ್ತಕಗಳು ಅಗತ್ಯವಾಗಿಸುವುದು ಅತಿ ವಿರಳ. ಕೆಲವು ಪಠ್ಯಪುಸ್ತಕಗಳು ತರಗತಿಯ ಚಟುವಟಿಕೆಗಳನ್ನು ಕಟ್ಟಳೆಯಂತೆ ಪಟ್ಟಿಮಾಡುತ್ತವೆ. ಅನೇಕವೇಳೆ ಈ ಚಟುವಟಿಕೆಗಳು ಒಂದು ಸಾಮಾನ್ಯ ತರಗತಿಯಲ್ಲಿ ಆಯೋಜಿಸಬಹುದಾದಂತಹ ವಿಧದವುಗಳಾಗಿರುವುದಿಲ್ಲ. ಏನೇ ಇರಲಿ ಮಕ್ಕಳು ಈ ಚಟುವಟಿಕೆಗಳಿಂದ ಏನನ್ನು ಕಲಿಯುತ್ತಾರೆ ಎಂದಂತೂ ಹೇಳಲಾಗಿರುತ್ತವೆ.

ಆಸಕ್ತಿಯನ್ನು ಕೆರಳಿಸುವ ನಿಟ್ಟಿನಲ್ಲಿ ಗಾಂಧಿಯವರ ಕಾಲದ ಪಠ್ಯಪುಸ್ತಕಗಳಿಗಿಂತಲೂ ಇಂದಿನ ಪಠ್ಯಪುಸ್ತಕಗಳು ಕಳಪೆಯಾಗಿವೆ. ಆದರೆ ಶಿಕ್ಷಕರ ಚೈತನ್ಯಭರಿತ ಪಾಲ್ಗೊಳ್ಳುವಿಕೆಯಿಂದ ಹಾಗೂ ಹೆಚ್ಚಿನ ಎಚ್ಚರದಿಂದ ಪಠ್ಯಪುಸ್ತಕಗಳನ್ನು ರಚಿಸುವುದರಿಂದ ಇಂತಹ ನ್ಯೂನತೆಗಳನ್ನು ಸರಿಪಡಿಸಬಹುದು. ತರಗತಿಯ ಸಾಮಗ್ರಿಗಳನ್ನು ತಯಾರಿಸಿಕೊಳ್ಳಲು ಮೂಲ ಶಿಕ್ಷಣದಲ್ಲಿ ಹಿಂದೆ ಶಿಕ್ಷಕರಿಗೆ ನೀಡುತ್ತಿದ್ದಂತಹ ತರಬೇತಿಗಳನ್ನು ಮುಂದಿನ ದಿನಗಳಲ್ಲಿ ಪಠ್ಯಪುಸ್ತಕ ರಚನೆಯಲ್ಲಿ ಪಾಲ್ಗೊಳ್ಳಲು ವರ್ಧಿಸಿದ ಮತ್ತು ಹೆಚ್ಚು ಸಾಮಾನ್ಯ ತಯಾರಿಗಾಗಿ ತರಬೇತಿಯಲ್ಲಿ ಸೇರಿಸಬಹುದು.

ಗಾಂಧಿಯವರ ಶೈಕ್ಷಣಿಕ ಚಿಂತನೆಯನ್ನು ಬಳಸುವ ಒಂದು ನವೀನ ಪ್ರಯತ್ನವು ಇಂದಿನ ಮಕ್ಕಳಿಗೆ ಪ್ರಸ್ತುತವಾದ ಜ್ಞಾನಗಳ ಬಗ್ಗೆ ಸೂಕ್ತ ಪರಿಕಲ್ಪನೆಗಳನ್ನು ಕಟ್ಟಿಕೊಳ್ಳಲು ಹೊಸ ಸಂಪೂರ್ಣವಾಗಿ ಭಿನ್ನವಾದಂತಹ ವಿಧಾನಗಳನ್ನು ಕಂಡುಕೊಳ್ಳಬೇಕು. ಪ್ರಾಯೋಗಿಕ ಹಾಗೂ ರಚನೆಯ ನೆಲೆಯಲ್ಲಿ ಮೂಲ ಶಿಕ್ಷಣವು ಯಾವ ಅಂಶಗಳಲ್ಲಿ ಸಮಸ್ಯೆಗಳನ್ನು ಹಿಂದಿನ ಅನುಭವಗಳ ಮೂಲಕ ಎತ್ತಿ ತೋರಿಸಿತೋ, ಆ ಅಂಶಗಳಲ್ಲಿ ಬದಲಾವಣೆಯನ್ನು ಇದು ತರಬೇಕು. ಬಾಲ್ಯದ ಮನಸ್ಸಿಗೆ ಸಂಬಂಧಿಸಿದಂತೆ ಇಂದು ನಮಗೆ ಲಭ್ಯವಿರುವ ಒಳನೋಟಗಳೂ ಇಂದಿನ ಹೊಸ ಕಾರ್ಯಕ್ರಮದಲ್ಲಿ ಬಿಂಬಿಸಬೇಕು.

ಈ ಕೆಳಗಿನ ಕೆಲವು ಪ್ರಮುಖ ಕ್ಷೇತ್ರಗಳು ಮರುಹುಟ್ಟು ಪಡೆದ ಮೂಲ ಶಿಕ್ಷಣ ಕಾರ್ಯಕ್ರಮಕ್ಕೆ ಒಂದು ಆಕರ್ಷಣೀಯ ಪಠ್ಯದ ವಿನ್ಯಾಸವಾಗಬಹುದು:

| ಪ್ರಮುಖ ಕ್ಷೇತ್ರ I | ಪ್ರಮುಖ ಕ್ಷೇತ್ರ II | ಪ್ರಮುಖ ಕ್ಷೇತ್ರ III | ಪ್ರಮುಖ ಕ್ಷೇತ್ರ IV |
|---|---|---|---|

| | | | |
|---|---|---|---|
| ಆರೋಗ್ಯ ಹಾಗೂ ನೈರ್ಮಲ್ಯ<br>ಪರಿಸರ ಅಧ್ಯಯನ<br>ಸಾಮಾಜಿಕ ಅಧ್ಯಯನ | ಪರಂಪರಾನುಗತ ಕರಕುಶಲ ಕಲೆಗಳು (ಉದಾ: ನೇಯ್ಗೆ, ಆಟಿಕೆ ಮಾಡುವುದು, ಮಣ್ಣಿನ ಕೆಲಸ ಅಥವಾ ಇತರೆ ಯಾವುದೇ ಕರ ಕುಶಲತೆ) | ಆಭಿವ್ಯಕ್ತಿ ಕಲೆಗಳು<br>ಓದುವುದು<br>ಬರಹ | ಗಣಿತ ಶಾಸ್ತ್ರ, ಪರಿಣಾಮಾತ್ಮಕ ಮಾಹಿತಿಗಳ ವಿಂಗಡಣೆ ಹಾಗು ಅವುಗಳನ್ನು ಪ್ರತಿನಿಧಿಸುವುದು |

ಮೇಲೆ ಹೆಸರಿಸಲಾದ ನಾಲ್ಕು ಪ್ರಮುಖ ಕ್ಷೇತ್ರಗಳು ಮಕ್ಕಳು ಒಂದರಿಂದ ಐದನೇ ತರಗತಿಗೆ ಹೋಗುವ ಅವಧಿಯಲ್ಲಿ ಅವರ ಅನುಭವದ ಹರವನ್ನು ಹಾಗೂ ಜ್ಞಾನವನ್ನು ವಿಸ್ತರಿಸಲು ಅವಕಾಶಗಳನ್ನು ನೀಡಬಹುದು ಎಂದು ನಿರೀಕ್ಷಿಸಬಹುದಾಗಿದೆ. ಪ್ರಾಥಮಿಕ ಶಿಕ್ಷಣದ ಉಳಿದ ತರಗತಿಗಳಾದ ಆರರಿಂದ ಎಂಟರವರೆಗಿನ ತರಗತಿಗಳಲ್ಲಿ ಜ್ಞಾನವನ್ನು ಇನ್ನಷ್ಟು ವರ್ಗೀಕರಿಸಲು ಈ ಪ್ರಮುಖ ಕ್ಷೇತ್ರಗಳು ಒಂದು ಆಧಾರವನ್ನು ಒದಗಿಸಬಹುದು.

ಈ ಪಠ್ಯಕ್ರಮ ವಿನ್ಯಾಸದಲ್ಲಿ ಹೆಚ್ಚಿನ ವಿವರಣೆಯನ್ನು ಬೇಡುವ ಎರಡು ಅಂಶಗಳೆಂದರೆ ಅವು ಪರಿಸರ ಅಧ್ಯಯನ ಹಾಗೂ ಪರಂಪರಾನುಗತ ಕರಕುಶಲ ಕಲೆಗಳು. ಇಂದಿನ ಪ್ರಾಥಮಿಕ ಹಂತದ ವಿಜ್ಞಾನ ಪಠ್ಯಕ್ರಮದಲ್ಲಿ ಪರಿಸರ ಆಧ್ಯಯನದಲ್ಲಿ ಪರಿಸರದ ಮೇಲೆ ನಿಯಂತ್ರಣ ಸ್ಥಾಪಿಸುವ ಹಾಗೂ ಅಧೀನಪಡಿಸಿಕೊಳ್ಳುವ ಒಳಉದ್ದೇಶವು ಹಾಸುಹೊಕ್ಕಾಗಿದೆ. ಮಾನವ ಹಾಗೂ ಪರಿಸರ ಒಟ್ಟಾಗಿ ಬಾಳುವ ಗಾಂಧಿಯವರ ಲೋಕದೃಷ್ಟಿಗೆ ಇಂತಹದೊಂದು ಕಲ್ಪನೆಯು ಸಂಪೂರ್ಣ ವಿರುದ್ಧವಾಗಿದೆ. ಪರಿಸರ ಸಮತೋಲನ ಹಾಗೂ ಸುಸ್ಥಿರತೆಯ ಬಗೆಗಿನ ಇಂದಿನ ವ್ಯಪಕವಾಗಿ ಒಪ್ಪಿತವಾದ ಗ್ರಹಿಕೆಯೊಂದಿಗೂ ಸಹ ಇದು ಸಂಘರ್ಷಿಸುತ್ತದೆ, ಉದಾ: ರೋಗ-ನಿಯಂತ್ರಣದ ಹಿನ್ನೆಲೆಯಲ್ಲಿ ವಿಷದ ನೆರವನ್ನು ತೆಗೆದುಕೊಳ್ಳುವುದು. ಇಂತಹ ಕಾರ್ಯತಂತ್ರಗಳಲ್ಲಿನ ವಿರೋಧಾಭಾಸಗಳನ್ನು ಶಾಲೆಗಳು ಒಲ್ಲದ ಮನಸ್ಸಿನಿಂದ ಗುರುತಿಸುವ ಮುನ್ನವೇ ಮಕ್ಕಳು ಬಹಳ ಬೇಗ ಗಮನಿಸಿಬಿಡುತ್ತಾರೆ. ಶಾಲಾ ಬೋಧನಾ ವಿಧಾನದಲ್ಲಿ ಬದುಕು ಮತ್ತು ಆರೋಗ್ಯವನ್ನು ಸಮಗ್ರವಾಗಿ ನೋಡುವಂತಹ ಪರಿಸರ ಅಧ್ಯಯನವನ್ನು ಅಳವಡಿಸಿಕೊಂಡರೆ ಈ ನಿಧಾನ ಗತಿಯ ಗುರುತಿಸುವಿಕೆಯು ಉಂಟುಮಾಡುವ ಗೊಂದಲ ಹಾಗೂ ಸಿನಿಕತನಗಳನ್ನು ತಪ್ಪಿಸಬಹುದು.

ಪ್ರಾಥಮಿಕ ಶಾಲೆಯ ಪಠ್ಯಕ್ರಮದಲ್ಲಿ ಪಾರಂಪರಿಕ ಕರಕುಶಲಕಲೆಗಳನ್ನು ಸೇರಿಸುವುದರಿಂದ ಹಲವು ವಿವಿಧ ಶೈಕ್ಷಣಿಕ ಗುರಿಗಳನ್ನು ಸಂಯೋಜಿಸಿರುವಂತಹ ವಿಶಿಷ್ಟ ಕೊಡುಗೆಯನ್ನು ನೀಡಬಹುದೆಂದು ನಿರೀಕ್ಷಿಸಬಹುದು. ಆ ಕೌಶಲಗಳಲ್ಲಿ ಕೈಕೌಶಲಗಳು ಹಾಗೂ ಕೈಚಳಕ, ಸೌಂದರ್ಯ ಪ್ರಜ್ಞೆ, ಮತ್ತು ಸಾಂಪ್ರದಾಯಿಕ ಶಾಲಾ ಪಠ್ಯಕ್ರಮ ಹಾಗೂ ಸಂಸ್ಕೃತಿಯು ಬೆಳೆಸಲು ವಿಫಲವಾಗುವ ವ್ಯಕ್ತಿತ್ವದ ಕೆಲವು ಆಯಾಮಗಳನ್ನು ಬೆಳೆಸುತ್ತವೆ. ಈ ಆಯಾಮಗಳು ತನ್ನ ಸಾಮರ್ಥ್ಯದಲ್ಲಿನ ನಂಬಿಕೆ ಹಾಗೂ ಅದು ಮೌಲ್ಯ ಉಳ್ಳದ್ದು ಎಂಬ ಭಾವದಿಂದ ಹುಟ್ಟುವ ಆತ್ಮಗೌರವಕ್ಕೆ ಸಂಬಂಧಿಸಿವೆ. ಆಧುನಿಕತೆಯನ್ನು ಅಪೂರ್ಣವಾಗಿ ಪರಿಕಲ್ಪಿಸಲಾಗಿರುವ ಪರಿಣಾಮಾದಿಂದಾಗಿ ಬಲು ದೊಡ್ಡ ಪ್ರಮಾಣದಲ್ಲಿ ಯಾಂತ್ರೀಕರಣಗೊಳ್ಳುತ್ತಿರುವ ತರುಣರ ಕೌಶಲ್ಯಗಳನ್ನು ಪಾರಂಪರಿಕ ಕರಕುಶಲಕಲೆಗಳನ್ನು ಬಾಲ್ಯದಲ್ಲಿಯೇ ಹೇಳಿಕೊಡುವ ಮೂಲಕ ತಡೆಯಬಹುದಾಗಿದೆ. ಸಂಗೀತ, ಚಿತ್ರಕಲೆ ಹಾಗೂ ವರ್ಣಚಿತ್ರಕಲೆ ಅಂತಹ ಅಭಿವ್ಯಕ್ತಿ ಕಲೆಗಳೊಂದಿಗೆ ಕರಕುಶಲಕಲೆಗಳು ಇಂದ್ರಿಯಗಳಿಗೆ ಅತ್ಯಂತ

ಅಗತ್ಯವಿರುವ ತರಬೇತಿಯನ್ನು ನೀಡಬಲ್ಲುವು. ಅಂತಹ ಇಂದ್ರಿಯ ತರಬೇತಿಯು ಅರ್ಥಪೂರ್ಣವಾದ ಅಕ್ಷರ ಕೌಶಲಗಳ ಬೆಳವಣಿಗೆಗೆ ದಾರಿಯಾಗಬಲ್ಲದು.

ಮೇಲೆ ಸೂಚಿಸಿದ ಈ ಪ್ರಮುಖ ಕ್ಷೇತ್ರಗಳಿಗೆ ಸೇರಿಸಬಹುದಾದ ನಿರ್ದಿಷ್ಟ ಚಟುವಟಿಕೆ ಹಾಗೂ ಅಧ್ಯಯನ ವಿಷಯಗಳನ್ನು ಪ್ರಾದೇಶಿಕ ಹಾಗು ಸ್ಥಳೀಯ ಮಟ್ಟದಲ್ಲಿಯೇ ಗುರುತಿಸಬೇಕು. ಈ ಪ್ರಯೋಗಕ್ಕೆ ಗಾಂಧಿಯವರ ಬಳುವಳಿ ಹಾಗೂ ಮಕ್ಕಳ ಮನಃಶ್ಯಾಸ್ತ್ರದಿಂದ ಪಡೆದ ಈ ಕೆಳಗಿನ ಆಲೋಚನೆಗಳನ್ನು ಮಾರ್ಗದರ್ಶಿ ತತ್ವಗಳನ್ನಾಗಿ ಪರಿಗಣಿಸಬಹುದು:

- ಅಗತ್ಯ ಜ್ಞಾನ ಹಾಗೂ ಕೌಶಲಗಳನ್ನು ಪಟ್ಟಿಮಾಡಲು ಮಗುವಿನ ಸುತ್ತಲಿನ ನೇರ ಸಾಮಾಜಿಕ ಪರಿಸರವನ್ನು ಒಂದು ಸಂಪನ್ಮೂಲವಾಗಿ ಪರಿಗಣಿಸುವುದು (ಉದಾ: ಸ್ಥಳೀಯ ಹಕ್ಕಿಗಳು, ಹೂವುಗಳು, ಬೆಳೆಗಳು ಹಾಗೂ ಮರಗಳು; ಸ್ಥಳೀಯ ಭಾಷೆ ಹಾಗೂ ಜಾನಪದ ಸಾಹಿತ್ಯ; ಮತ್ತು ಸ್ಥಳೀಯವಾಗಿ ಬಳಕೆಯಲ್ಲಿರುವ ಕುಶಲಕಲೆ ಹಾಗೂ ಅಭಿವ್ಯಕ್ತಿ ಕಲೆಗಳು).
- ಎಲ್ಲ ವಿಷಯಗಳನ್ನು ಚಟುವಟಿಕೆಗಳ ಮೂಲಕ ಕಲಿಸುವುದು. ಈ ಚಟುವಟಿಕೆಗಳು ಪಠ್ಯಕ್ರಮದ ಮಾರ್ಗದರ್ಶನ ಸೂಚನೆಯಲ್ಲಿ ಸೂಚಿಸಿದ್ದಿರಬಹುದು ಅಥವಾ ಶಿಕ್ಷಕರು ರೂಪಿಸಿದ ಹೊಸವಿರಬಹುದು.
- ಮಕ್ಕಳು ಸಣ್ಣ ಗುಂಪುಗಳಲ್ಲಿ ಕೆಲಸ ಮಾಡುವಂತೆ ತರಬೇತಿ ನೀಡುವುದು.
- ತರಗತಿಯ ಚಟುವಟಿಕೆಗಳು ಮನೆಯಲ್ಲಿ ಮಗುವಿನ ಬದುಕನ್ನು ವಿಸ್ತರಿಸುವ ಗುರಿ ಹೊಂದಿರಬೇಕು.
- ಪ್ರತಿದಿನವೂ ತರಗತಿಯ ಹೊರಗಡೆ ಕೆಲಸ ಮಾಡುವುದನ್ನು ಅಗತ್ಯಗೊಳಿಸುವಂತೆ ಕೆಲವು ಚಟುವಟಿಕೆಗಳು ಅವಕಾಶಗಳನ್ನು ಒದಗಿಸಬೇಕು.
- ಹಲವು ದಿನಗಳನ್ನೇ ತೆಗೆದುಕೊಳ್ಳಬಹುದಾದ ಕೆಲವು ವಿಷಯಗಳನ್ನು ಆಳವಾದ ಅಧ್ಯಯನಕ್ಕೆಂದು ಆಯ್ಕೆ ಮಾಡಿಕೊಳ್ಳುವುದು, ಅವು ಒಂದು ಕಾರ್ಯಯೋಜನೆಯ ಸ್ವರೂಪವನ್ನು ತೆಗೆದುಕೊಳ್ಳುವುದು.
- ಮಕ್ಕಳು ಶಿಕ್ಷಕರ ನೆರವಿಲ್ಲದೆ ಸ್ವತಂತ್ರವಾಗಿ ಕೆಲಸ ಮಾಡಲು ಅವಕಾಶಗಳನ್ನು ನೀಡುವುದು.

ಈ ಮಾರ್ಗದರ್ಶಿ ತತ್ವಗಳ ಸ್ವೀಕಾರವು ಇಂದಿನ ಶಿಕ್ಷಕ ತರಬೇತಿಯನ್ನು ಬದಲಿಸುವುದರೆಡೆಗೆ ಬಲುದೊಡ್ಡ ಉಪಕ್ರಮವನ್ನೇ ಬೇಡುತ್ತದೆ. 50ರ ದಶಕದ ಮೂಲ ಶಿಕ್ಷಣದ ಯೋಜನೆಗಳನ್ನು ಹಾಗೂ ಕೆಲವು ಗಾಂಧೀವಾದಿ ಸಂಸ್ಥೆಗಳಲ್ಲಿನ ಪ್ರಸ್ತುತ ತರಬೇತಿ ಕಾರ್ಯಕ್ರಮಗಳನ್ನು ದಾಖಲಿಸಿರುವ ಸಾಹಿತ್ಯದಲ್ಲಿ ಅಂತಹ ಉಪಕ್ರಮದ ಯೋಜನೆಯನ್ನು ರಚಿಸುವಾಗ ಉಪಯುಕ್ತವಾಗುವ ಆಲೋಚನೆಗಳನ್ನು ಕಂಡುಕೊಳ್ಳುವುದನ್ನು ನಾವು ವಾಸ್ತವಿಕವಾಗಿ ಆಶಿಸಬಹುದು.

ಮೂಲ ಶಿಕ್ಷಣದ ಪ್ರಮುಖ ಉದ್ದೇಶವನ್ನು ಸಾಕಾರಗೊಳಿಸುವಲ್ಲಿ ಬಹಳ ಸಹಾಯಕವಾಗಬಹುದಾದ ಒಂದು ಸಾಂಸ್ಥಿಕ ಬದಲಾವಣೆಯೆಂದರೆ ಸಮುದಾಯದ ಮಟ್ಟದ ಆರೋಗ್ಯ ಸೇವೆಗಳನ್ನು ಸ್ಥಳೀಯ ಪ್ರಾಥಮಿಕ ಶಾಲೆಗಳೊಂದಿಗೆ ಸಂಯೋಜಿಸುವುದು. ಹಳ್ಳಿಯ ಮಟ್ಟದ ಆರೋಗ್ಯ ಕಾರ್ಯಕರ್ತರು ಶಾಲೆಯ ಶಿಕ್ಷಕರಿಗಿಂತಲೂ ಹೆಚ್ಚಿನ ಬಾಂಧವ್ಯವನ್ನು ಸಮುದಾಯದೊಡನೆ ಹೊಂದಿರುತ್ತಾರೆ ಎನ್ನುವುದು ಸಾಮಾನ್ಯ ಅನುಭವ. ಖಂಡಿತವಾಗಿಯೂ, ಪ್ರದೇಶಕ್ಕನುಗಣವಾಗಿ ಪರಿಸ್ಥಿತಿಯು ಭಿನ್ನವಾಗಿರುತ್ತದೆ, ಆದರೆ ಸಾಮಾನ್ಯವಾಗಿ ಆರೋಗ್ಯ ಕಾರ್ಯಕರ್ತರು ಪೋಷಕರು ಹಾಗೂ ಮಕ್ಕಳೊಡನೆ ಶಿಕ್ಷಕರಿಗಿಂತ ಹೆಚ್ಚು ವೈಯಕ್ತಿಕ ಪರಿಚಯವನ್ನು ಹೊಂದಿರುತ್ತಾರೆ. ಮಕ್ಕಳ ಆರೋಗ್ಯ ಸಂಬಂಧಿತ ವಿಷಯಗಳನ್ನು ಗಮನಿಸಿ ಆ ಸಮಸ್ಯೆಗಳಿಗೆ ಸೂಕ್ತ ಸಲಹೆ ನೀಡಲು ಶಿಕ್ಷಕರಿಗಿಂತಲೂ ಸಾಮಾನ್ಯವಾಗಿ ಆರೋಗ್ಯ ಕಾರ್ಯಕರ್ತರು ಹೆಚ್ಚು ಸಮರ್ಥರಾಗಿರುತ್ತಾರೆ. ಆದ್ದರಿಂದ ಮಕ್ಕಳ ಒಳಿತಿಗಾಗಿ ಕೆಲಸ ಮಾಡುವ ಶಾಲೆಯ ಸಾಮರ್ಥ್ಯವನ್ನು ಆರೋಗ್ಯಕಾರ್ಯಕರ್ತರ ಸೇವೆಯನ್ನು ಶಾಲಾ

ಯೋಜನೆಯಲ್ಲಿ ಸೇರಿಸಿಕೊಳ್ಳುವುದರಿಂದ ಹೆಚ್ಚಿಸಬಹುದು. ಶಾಲೆಗಳು ಈಗ ನೀಡುವ ಹಂಚಿಹೋದ ಹಾಗೂ ಅತ್ಯಲ್ಪ ಬೋಧನೆಯು ಆರೋಗ್ಯ ಹಾಗೂ ನೈರ್ಮಲ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಬೆಳೆಯುತ್ತಿರುವ ಮಕ್ಕಳ ಪ್ರಾಯೋಗಿಕ ಜ್ಞಾನಕ್ಕೆ ಪ್ರಮುಖ ಕಾಳಜಿಯನ್ನಾಗಿ ಮಾಡುವಲ್ಲಿ ಯಶಸ್ವಿಯಾಗುವುದು ಬಹಳ ಅಪರೂಪ.

ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಳ (ICDS (ಐಸಿಡಿಎಸ್)) ಕಾರ್ಯಕ್ರಮಗಳ ಅಡಿಯಲ್ಲಿ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಾಲಾಪೂರ್ವ ಶಿಕ್ಷಣಕ್ಕೆ ಈಗ ಒದಗಿಸುತ್ತಿರುವ ಸೇವೆಗಳ ಸಂದರ್ಭದಲ್ಲಿ ಇಂತಹುದೇ ಹೆಜ್ಜೆಗಳನ್ನು ತೆಗೆದುಕೊಳ್ಳಬೇಕು. ಈ ಕಾರ್ಯಕ್ರಮಗಳ ಅಡಿಯಲ್ಲಿ ಸಾವಿರಾರು ಹಳ್ಳಿಗಳಿಗೆ ಲಭ್ಯವಾಗುತ್ತಿರುವ ಇದರ ಸೇವೆಗಳು ಮಕ್ಕಳು ಶಾಲೆಗೆ ಒಗ್ಗಿಕೊಳ್ಳುವ ಪ್ರಕ್ರಿಯೆಯನ್ನು ಸುಲಭಗೊಳಿಸುವ ಗುರಿಯನ್ನು ಹೊಂದಿದ್ದರೂ ಸಹ ಅವು ಶಾಲೆಯಿಂದ ಬೇರೆಯಾಗಿಯೇ ಉಳಿದಿವೆ ಎಂಬುದು ವ್ಯಂಗ್ಯವೇ ಸರಿ. ಇಂತಹ ಸೇವೆಗಳನ್ನು ಶಾಲೆಗಳಿಂದ ಹೊರಗಿಟ್ಟಿರುವುದರಿಂದ ವಿವಿಧ ಸಂಸ್ಥೆಗಳ ಸ್ವರೂಪ ಹಾಗೂ ಕೆಲಸಗಳು ಏನೆಂಬುದರ ಬಗ್ಗೆ ಸಮುದಾಯಗಳಲ್ಲಿ ಗೊಂದಲಗಳನ್ನು ಹೆಚ್ಚಿಸಿವೆ. ಈ ಸಂಸ್ಥೆಗಳ ಚಟುವಟಿಕೆಗಳಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸುವಲ್ಲಿ ಇಂತಹ ಗೊಂದಲಗಳು ಅಡ್ಡಿಯಾಗುತ್ತವೆ. ನಿಜಕ್ಕೂ ಒಂದು ಸಮಗ್ರವಾದ ಮಕ್ಕಳ ಸಂಬಂಧೀ ಕಾರ್ಯಕ್ರಮಗಳ ಸಮುಚ್ಚಯವು ಜನರು ಈ ಕಾರ್ಯಕ್ರಮಗಳಲ್ಲಿ ಸಕ್ರಿಯ ಆಸಕ್ತಿಯನ್ನು ಬೆಳೆಸಿಕೊಳ್ಳುವಂತೆ ಹಾಗೂ ಅವುಗಳಿಗೆ ಜವಾಬ್ದಾರಿಯನ್ನು ತಗೆದುಕೊಳ್ಳುವಂತೆ ಹುರಿದುಂಬಿಸುವಲ್ಲಿ ಸಫಲವಾಗುವ ಸಾಧ್ಯತೆಗಳನ್ನು ಹೆಚ್ಚಿಸಬಲ್ಲವು. ಆ ರೀತಿ ಕಾರ್ಯಕ್ರಮಗಳನ್ನು ಒಂದುಗೂಡಿಸುವುದು ಮೂಲ ಶಿಕ್ಷಣದ ಕಲ್ಪನೆಯಲ್ಲಿ ಅಡಕವಾಗಿರುವ ಸಮುದಾಯದ ಒಳಿತಿನ ಸಮಗ್ರ ದೃಷ್ಟಿಯೊಂದಿಗೆ ಹೊಂದಿಕೊಳ್ಳುವುದು.

ಕೊನೆಯದಾಗಿ, ಶಿಕ್ಷಕರು ಸಮುದಾಯ ಹಾಗೂ ಕುಟುಂಬದೊಡನೆ ಸಂಪರ್ಕವನ್ನು ಸಾಧಿಸಲು ಸಾಧ್ಯವಾಗುವಂತಹ ಪರಿಸ್ಥಿತಿಗಳನ್ನು ಸೃಷ್ಟಿಸುವ ಕೆಲಸವನ್ನೂ ಹೊಸ ಮೂಲ ಶಿಕ್ಷಣ ಕಾರ್ಯಕ್ರಮವು ಎತ್ತಿಕೊಳ್ಳಬೇಕು. ಈ ಉದ್ದೇಶಕ್ಕೆಂದೇ 50ರ ದಶಕದಲ್ಲಿ ಮೂಲ ಶಿಕ್ಷಣದ ಯೋಜಕರು ಶಾಲಾ ವಿನ್ಯಾಸಗಳು ಶಿಕ್ಷಕರಿಗೆ ವಸತಿಯನ್ನು ಒಳಗೊಳ್ಳುವಂತ ರೀತಿಯಲ್ಲಿ ಯೋಜಿಸಿದರು. ಅಂದು ಮಾಡಲಾದ ಪೂರ್ವಸಿದ್ಧತೆಗಳನ್ನು ನಾವು ಪುನಃ ಅವಲೋಕಿಸಬೇಕಾಗುತ್ತದೆ, ಏಕೆಂದರೆ ಯಾವ ಸಮಸ್ಯೆಯನ್ನು ಪರಿಹರಿಸಲು ಅದು ಪ್ರಯತ್ನಿಸಿತ್ತೋ ಆ ಸಮಸ್ಯೆಯು ಇಂದಿಗೂ ಪ್ರಾಥಮಿಕ ಶಿಕ್ಷಣವನ್ನು ಬಾಧಿಸುತ್ತಿದೆ. ವಾಸ್ತವವಾಗಿ ಈ ಸಮಸ್ಯೆಯು ಮತ್ತೂ ಗಂಭೀರವಾಗಿಬಿಟ್ಟಿದೆ. ಲಕ್ಷಾಂತರ ಪ್ರಾಥಮಿಕ ಶಿಕ್ಷಕರು ದಿನವೂ ಅವರ ಹಳ್ಳಿಯ ಶಾಲೆಗೆ ಮತ್ತು ಮನೆಗೆ ಸಾರ್ವಜನಿಕ ಸಾರಿಗೆಯಲ್ಲಿ ಓಡಾಡುವ ಕಾರಣ ಅವರ ಶಕ್ತಿ ಮತ್ತು ಪರಿಮಿತ ವೈಯಕ್ತಿಕ ಸಂಪನ್ಮೂಲಗಳು ಪೋಲಾಗುತ್ತಿರುವುದು ಒಂದು ದುರಂತವೇ; ಅಷ್ಟೇ ಅಲ್ಲದೇ ಶಿಕ್ಷಕರು ಸೇವೆ ಮಾಡಬೇಕಾಗಿರುವ ಸಮುದಾಯ ಹಾಗೂ ಮಕ್ಕಳಿಗೂ ಸಹ ಅದು ದೊಡ್ಡ ನಷ್ಟವೇ.

ಶಿಕ್ಷಕರು ಅವರ ಸ್ಥಳೀಯ ಸಮುದಾಯದ ಭಾಗವಾಗಲು ಅನುವು ಮಾಡಿಕೊಡುವುದರಿಂದ ಮಕ್ಕಳ ಶಾಲೆಯ ಹೊರಗಿನ ಬದುಕಿನಲ್ಲಿ ಅವರ ಒಳಗೊಳ್ಳುವಿಕೆಯನ್ನು ಹೆಚ್ಚಿಸುತ್ತದೆ. ಶಿಕ್ಷಕರು ಕೆಲಸ ಮಾಡುತ್ತಿರುವ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಶಿಕ್ಷಕರನ್ನೇ ಜವಾಬ್ದಾರರನ್ನಾಗಿ ಮಾಡುವುದೊಂದೇ ಗಾಂಧಿಯ ತತ್ವಾನುಸಾರ ಶೈಕ್ಷಣಿಕ ಪುನಾರಚನೆಯ ಯೋಜನೆಯ ಗುರಿಯಾಗಿರಲು ಸಾಧ್ಯ. ಈ ನಿಟ್ಟಿನಲ್ಲಿ ಮುಂದುವರೆಯುವುದು ಶಾಲೆಗಳ ಹಾಗೂ ಶಿಕ್ಷಕರ ಮೇಲಿನ ಆಡಳಿತಾತ್ಮಕ ನಿಯಂತ್ರಣದ ವ್ಯವಸ್ಥೆಯನ್ನು ಎಷ್ಟರ ಮಟ್ಟಿಗೆ ಶಿಕ್ಷಕರು ಮತ್ತು ಸಮುದಾಯವು ಜಂಟಿಯಾಗಿ ನಿರ್ವಹಣೆಗೆ ಜವಾಬ್ದಾರಿಯನ್ನು ಹೊಂದುವ ವ್ಯವಸ್ಥೆಯಿಂದ ಬದಲಾಯಿಸಲು ಸಾಧ್ಯವಾಗುತ್ತದೆ ಎನ್ನುವುದನ್ನು ಆಧರಿಸಿದೆ. ಪ್ರಾಥಮಿಕ ಹಂತದ ಶಿಕ್ಷಕರು ಎಲ್ಲಾ ಸುಧಾರಣೆಗಳನ್ನೂ ಸಿನಿಕತನ ಹಾಗೂ ನಿರಾಸಕ್ತಿಯಿಂದ ಕಾಣುವುದರ ಹಿಂದೆ ಅವರು ಅಧಿಕಾರಿಗಳಿಂದ ಅನುಭವಿಸುವ ಅಗೌರವವು ಹೆಚ್ಚು ಪ್ರಸಕ್ತ ಕಾರಣವಾಗಿರುತ್ತದೆ. ಆಳವಾಗಿ ಬೇರೂರಿದ ಆರ್ಥಿಕ ಹಾಗೂ ಆಡಳಿತಾತ್ಮಕ ನಿಯಂತ್ರಣದ ರೀತಿಗಳಲ್ಲಿ ಬದಲಾವಣೆಯಾಗದೆ ಈ ಮನೋಭಾವನೆ ಬದಲಾಗುವುದು

ಸಾಧ್ಯವಿಲ್ಲ.  ವ್ಯವಸ್ಥೆಯಲ್ಲಿನ ಪ್ರತಿಯೊಂದು ಸಣ್ಣ ವಿವರ ಅಥವಾ ದೈನಂದಿನ ಕಾರ್ಯನಿರ್ವಹಣೆಯಲ್ಲಿ ಅಧಿಕಾರ ಹಾಗೂ ನಿರ್ಧಾರ ತೆಗೆದುಕೊಳ್ಳುವುದು ಇದ್ದೇ ಇರುತ್ತದೆ. ಒಂದು ದೊಡ್ಡ ವಸಾಹತುಶಾಹಿ ಯಂತ್ರದ ಅಸಂಖ್ಯ ತಿರುಪು ಮೊಳೆಗಳಂತೆ ಈ ಸಣ್ಣ ವಿವರಗಳನ್ನು ಕಲ್ಪಿಸಿಕೊಳ್ಳಬಹುದು. ಶಿಕ್ಷಕರ ಮನಸ್ಸು ಹಾಗೂ ಸಮುದಾಯದ ಬೆಂಬಲವನ್ನು ಗೆಲ್ಲಲು ಮಾಡುವ ಎಲ್ಲ ಅತ್ಯುತ್ತಮ ಚಿಂತನೆಗಳೂ ಈ ತಿರುಪು ಮೊಳೆಗಳಡಿಯಲ್ಲಿ ನಲುಗಿ ಹೋಗುತ್ತವೆ. ಈ ತಿರುಪು ಮೊಳೆಗಳು ಹಾಗೆಯೇ ಉಳಿದುಕೊಂಡರೆ ಹೊಸ ಮೂಲ ಶಿಕ್ಷಣ ಕಾರ್ಯಕ್ರಮವು ಸಫಲವಾಗುವ ಸಾಧ್ಯತೆಯೇ ಇಲ್ಲ.

(Source: Excerpted from Seminar No 436, December 1995)

(ಈ ಲೇಖನಕ್ಕೆ ಆಧಾರವಾಗಿರುವ ಕ್ಷೇತ್ರ ಟಿಪ್ಪಣಿಗಳನ್ನು ಸ್ನೇಹಲತಾ ಗುಪ್ತಾ ಹಾಗೂ ಮಾಳವಿಕಾ ರೈ ಅವರು ಕಠ್ಮಂಡುವಿನ ಯುನಿಸೆಫ್ ಪ್ರಾದೇಶಿಕ ಕಚೇರಿಯ ನೆರವಿನಿಂದ ನಡೆದ ಅಧ್ಯಯನದಲ್ಲಿ ಸಂಗ್ರಹಿಸಿದ್ದಾರೆ.)

ಆನ್ಲೈನ್ ಸಂಕಲನ: ವಿದ್ಯಾ